MADAM SPEAKER —The question is :

"That the Karnataka Rent Controle (Amendment) Bill, 1976 be taken into consideration."

The motion was adopted

Clauses 2 and 3

MADAM SPEAKER.—The question is :

"That Clauses 2 and 3 do stand part of the Bill."

The motion was adopted.

Clauses 2 and 3, were added to the Bill.

Clause 1 etc.,

MADAM SPEAKER.—The question is :

"That Clause 1, the long title the preamble and the enacting formula do stand part of the Bill"

The motion was adopted

Clause 1, the long Title and the preamble and the enacting formule were added to the Bill.

Motion to pass

SRI N. HUTCHAMASTHY GOWDA (Minister for Revenue) —Madam Speaker, I beg to move :

"That the Karnataka Rent Control (Amendment) Bill 1976 be passed."

MADAM SPEAKER.—The question is :

That the Karnataka Rent Control (Amendment) Bill, 1976 be passed.

The motion was adopted and the bill was passed

THE KARNATAKA LAND REVENUE (AMENDMENT) BILL, 1976 PASSED AS BY THE L.C.

Motion to Consider

SRI N. HUTCHAMASTHY GOWDA (Minister for Revenue).—Madam Speaker, I beg to move :

'That the Karnataka Land Revenue (Amendment) Bill, 1976 as passed by the Legislative Council be taken into consideration.'

MADAM SPEAKER—Motion moved.

"That the Karnataka Land Revenue (Amendment) Bill, 1976 as passed by the Legislative Council be taken into consideration."

†ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯ ಉದ್ದೇಶ ಎರಡು ಇದೆ. ಮೊದಲನೆಯದು ಈಗ ಇರುವ ಹಾಗೆ ಕಾನೂನಿನಲ್ಲಿ ಇರತಕ್ಕ ಳಿನೇ ವಿಧಿಯ ಲ್ಲಿ ತಹಸೀಲ್ದಾರರು ಕೊಟ್ಟಂತಹ ತೀರ್ಮಾನದ ಮೇಲೆ ಅಪೀಲು ಕ.ಆರ್.ಎ.ಟಿ.ಗೆ ಹೋಗಬೇಕು ಎಂದು ಒಂದು ತೀರ್ಮಾನ ಬಂದಿದೆ. ಈಗ ಇರತಕ್ಕ ರೀತಿಯಲ್ಲಿ ಕಾನೂನಿನಲ್ಲಿ ಇರತಕ್ಕ ಪದ ಇನ್‌ವೆಸ್ಟೆಡ್ ಎಂದು ಇದೆ. ತಹಸೀಲ್ದಾರರು ಡೆಪ್ಯುಟಿ ಕಮಿಷನರ್‌ರವರ ಅಧಿಕಾರ ವಹಿಸಿಕೊಂಡಿರಲಿ, ಇಲ್ಲದೇ ಇರಲಿ ಆ ಅಪೀಲು ಕಮಿಷನರಿಗೆ ಹೋಗಬೇಕು ಎಂದು ಅರ್ಥ, ಅದನ್ನು ಡೆಲಿಗೇಟ್ ಮಾಡಿದೆ ಎಂದು ಅವರು ತೀರ್ಮಾನ ಕೊಟ್ಟಮೇಲೆ, ಆ ಡೆಲಿಗೇಟ್ ಪದವನ್ನು ಹೊಸದಾಗಿ ಇದರಲ್ಲಿ ಸೇರಿಸಿದೆ. ಇದರಿಂದ ಏನಾಗುತ್ತದೆ ಎಂದರೆ ಡೆಪ್ಯುಟಿ ಕಮಿಷನರ್‌ರವರು ತಮ್ಮ ಅಧಿಕಾರವನ್ನು ತಹಸೀಲ್ದಾರರಿಗೆ ಕೊಡಲಿ ಅಥವಾ ಕೊಡದೇ ಇರಲಿ ಅವರು ಕೈಗೊಂಡಂತಹ ತೀರ್ಮಾನದ ಮೇಲೆ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಅಪೀಲು ಹೋಗುವುದಕ್ಕೆ ಅವಕಾಶ ಇರಬೇಕು ಎಂದು ಆಗುತ್ತದೆ ಎರಡನೆಯದು ೧ನೇ ಜುಲೈ ೧೯೬೮ನೇ ಇಸವಿ ತೀರ್ಮಾನದಿಂದ ಬಗರ್ ಹುಕ್ಕುಂ ಸಾಗುವಳಿ ಇದ್ದರೆ ಅವುಗಳನ್ನು ಖಾಯಂ ಮಾಡಬೇಕು ಎನ್ನುವ ಅರ್ಥ ಬರುತ್ತದೆ.

(Mr. DEPUTY SPEAKER IN THE CHAIR)

ಅದನ್ನು ನೂಕ್ಷ್ಮವಾಗಿ ನೋಡಿದರೆ, ಅಷ್ಟು ಅವಕಾಶವಿದೆ ಎಂದು ಹೇಳುವ ಹಾಗಿಲ್ಲ. ಆದರೆ, ಹೆಚ್ಚು ಲಕ್ಷ್ಯ ಕೊಟ್ಟು ಮಾಡುವುದಕ್ಕೆ ಅವಕಾಶ ಇದೆ. ಆದರೂ ಕೂಡ ಆ ಅರ್ಥಕ್ಕೆ ಅವಕಾಶವಾಗಿದೆ ಎಂದು ಹೇಳಿ, ಆ ತಾರೀಖಿಗೆ ಹಿಂದೆ ಬಗರ್ ಹುಕುಂ ಸಾಗುವಳಿ ಆಗಿರುವುದನ್ನು ಖಾಯಂ ಮಾಡತಕ್ಕ ಸಂದರ್ಭಗಳೂ ಬಂತು. ಆ ಸ್ಥಳದ ಅಧಿಕಾರಿಗಳು ಖಾಯಂ ಮಾಡದೇ ಇದ್ದಾಗ, ಇದರ ಬಗ್ಗೆ, ಅಕ್ರಮಣ ನಡೆಯುವುದಕ್ಕೆ ಅವಕಾಶವಾಗಿ ಅನೇಕ ಕೋರ್ಟ್‌ಗಳಲ್ಲಿ ಮತ್ತು ಹೈಕೋರ್ಟ್‌ಗಳಲ್ಲಿ ಕೇಸುಗಳು ನಡೆಯುತಕ್ಕ ಪ್ರಸಂಗ ಉಂಟಾಗಿದೆ. ಅದೂ ಅಲ್ಲದೆ, ಹಿಂದೆ ಇದ್ದಂಥ ಕಾನೂನಿನಲ್ಲಿ ಒಂದು ಬದರಾವಣೆಯನ್ನು 94 ಎ ವಿಧಿಯಲ್ಲಿ ತಂದರು. ಅದೇ ನೆಂದರೆ, 1ನೇ ಜುಲೈ 1968ರ ಹಿಂದೆ ಇದ್ದಂಥವುಗಳಿಗೆ ಖಾಯಂ ಆಗಿ ಅವಕಾಶ ದೊರಕಿಸಿ ಕೊಡುವುದರಿಂದ, ಪರಿಸ್ಥಿತಿ ಏನಾಗಿದೆ ಎಂದರೆ, ಅನೇಕ ಜನ ಸರ್ಕಾರದ ಜಮೀನನ್ನು ಅಕ್ರಮಣ ಮಾಡತಕ್ಕ ಪ್ರನಂಗ ಬಂದಿತು. ಅದನ್ನು ತೆಗೆದು ಹಾಕದ ಹೊರತು ಮತ್ತು ಸರ್ಕಾರದ ಭೂಮಿಯನ್ನು ಅಕ್ರಮಪಡಿಸಿಕೊಂಡಿರುವವರಿಗೆ ಒಂದು ಭಯ ಇರಬೇಕಾದುದು ಅವಶ್ಯಕವೆಂದು ನನ್ನ ಭಾವನೆ. ನುಮಾರು ಮೂರು ಲಕ್ಷ ಎಕರೆ ಭೂಮಿಯವರೆಗೆ ನಮ್ಮ ರಾಜ್ಯದ ಎಲ್ಲಾ ಭಾಗಗಳಲ್ಲಿ ಅಕ್ರಮ ಸಾಗುವಳಿಯಾಗಿದೆ. ಇದನ್ನು ತಪ್ಪಿಸಬೇಕಾದುದು ಅತ್ಯವಶ್ಯಕವೆಂಬುದು ಈ ಮಸೂದೆಯ ಮೊದಲ ಉದ್ದೇಶ. ಇನ್ನು ಎರಡನೆಯದಾಗಿ, ಹೀಗೆ ಸರ್ಕಾರದ ಜಮೀನನ್ನು ಅಕ್ರಮ ಸಾಗುವಳಿ ಮಾಡಿರತಕ್ಕವರು ಸಾಮಾನ್ಯವಾಗಿ ಹೆಚ್ಚು ಬಲಾಢ್ಯರು ಹಾಗು ಸಮಾಜದಲ್ಲಿ ಮೇಲೆರತಕ್ಕವರೇ ಆಗಿರುತ್ತಾರೆ. ಆದುದರಿಂದ, ಅಕ್ರಮ ಸಾಗುವಳಿ ಮಾಡಿರತಕ್ಕವರಿಗೇ ಆ ಜಮೀನನ್ನು ಮಂಜೂರುಮಾಡುವುದಕ್ಕೆ ಅವಕಾಶ ಕೊಟ್ಟರೆ, ಇದರಿಂದ ಹೆಚ್ಚು ಜಮೀನು ಇರತಕ್ಕವರಿಗೆ ಇನ್ನಷ್ಟು ಜಮೀನು ಸಿಕ್ಕಿದಂತಾಗುತ್ತದೆ. ಆದುದರಿಂದ, ನಾವು ಈಗಿರತಕ್ಕ ವಾಸ್ತವಾಂಶವನ್ನು ಮರೆಯುವ ಹಾಗಿಲ್ಲ. "1ನೇ ಜುಲೈ 1968ಕ್ಕೆ ಮುಂಚೆ ಅಕ್ರಮ ಸಾಗುವಳಿಯಾಗಿರತಕ್ಕವರಿಗೆ" ಎಂದು ನಿಯಮ ಇರುವುದರಿಂದ, ಅನೇಕ ಜನ, ಕೆಳಮಟ್ಟದ ನಣ್ಣಪುಟ್ಟ ಅಧಿಕಾರಿಗಳು, ನೆನ್ನೆ ಮೊನ್ನೆ ಅಕ್ರಮಣ ಮಾಡಿ ಕೊಂಡಿದ್ದರೂ, 1ನೇ ಜುಲೈ 1968 ರಿಂದೀಚೆಗೆ ಪಹಣಿಗಳನ್ನು ಹೊಸದಾಗಿ ಬರೆದು ಟಿ.ಟಿ. ಫೈನು ಹಾಕಿ ಸ್ವತ್ತನ್ನು ಅವರ ಸ್ವಾಧೀನಕ್ಕೆ ಮಾಡಿಕೊಟ್ಟಿರುವ ಪ್ರಕರಣಗಳು ಇವೆ. ಆದರೆ, ರೆಕಾರ್ಡ್ ಬಿಲ್ಡ್ ಆಪ್ ಮಾಡಿರುವುದೆಲ್ಲಾ ಹಿಂದಿನ ತಾರೀಖಿನಲ್ಲಿ ನಡೆದಿರುವಂತಿರುತ್ತದೆ. ಈ ರೀತಿ ಯಾರು ಸರ್ಕಾರದ ಜಮೀನನ್ನು ದುರಾಕ್ರಮಣ ಮಾಡುವುದಕ್ಕೆ ಹೊರಟಿದ್ದಾರೆ, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಳದರ್ಜೆ ಅಧಿಕಾರಿಗಳು ವರ್ತಿಸಿರುವ

ಪ್ರಕರಣಗಳು ನನ್ನ ಗಮನಕ್ಕೆ ಬಂದಿವೆ. ಇದನ್ನು ತಪ್ಪಿಸಬೇಕಾದುದು ಈ ಮನೆಯ ಎರಡನೆಯ ಉದ್ದೇಶ. ಮೂರನೆಯದಾಗಿ, ಈಗ ಇರತಕ್ಕ ಭೂಮಿಯಲ್ಲಿ ಹರಿಜನ ಗಿರಿಜನರಿಗೆ, ದುರ್ಬಲವರ್ಗದ ಜನರಿಗೆ ಒಟ್ಟು ಸರ್ಕಾರಿ ಭೂಮಿಯ ಅರ್ಧಭಾಗ ಕೊಡಬೇಕೆಂದು ನಿಯಮ ಮಾಡಿದ್ದಾರೆ. ಈ ನಿಯಮವನ್ನು ಸರಿಸುವಾಗ, ಆ ರೀತಿ ಭೂಮಿಯನ್ನು ಹಂಚಿಕೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ, ಆಕ್ರಮ ಸಾಗುವಳಿಯಾಗಿರುವುದನ್ನು ತಪ್ಪಿಸಿ, ಯಾವ ಯಾವ ಭೂಮಿ ಎಷ್ಟೆಷ್ಟು ಎಂಬ ಅವ್ಯೆಲಬಿಲಿಟಿ ಲಿಸ್ಟ್ ತೆಗೆದುಕೊಂಡು ಹಂಚುವುದಕ್ಕೆ ಸಾಧ್ಯವಾಗುತ್ತದೆ. ಹೀಗೆ, ಹರಿಜನ ಗಿರಿಜನರಿಗೆ ಮತ್ತು ದುರ್ಬಲವರ್ಗದವರಿಗೆ ಇದರಲ್ಲಿ 50 ಭಾಗ ಭೂಮಿಯನ್ನು ಹಂಚಿಕೆ ಮಾಡಿ, ಅವರಿಗೆ ಸಹಾಯ ಮಾಡಬೇಕು ಎನ್ನುವುದು ಈ ಮಸೂದೆಯ ಮೂರನೇ ಉದ್ದೇಶ. ಈ ಮೂರುನಾಲ್ಕು ಕಾರಣಗಳಿಂದ ಭೂಸುಧಾರಣಾ ಕಾಯಿದೆಯನ್ನು ಬದಲಾವಣೆ ಮಾಡಿ ತಂದಿದ್ದೇವೆ. ಈ ತಿದ್ದುಪಡಿಗಳು ನ್ಯಾಯವಾಗಿವೆ. ಇದಕ್ಕೆ ಬೆಂಬಲ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಂಡು, ಈ ವಿಷಯವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

† ಶ್ರೀ ಪೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮಂಡಿಸುವಂಥ ಮಸೂದೆ ಬಗ್ಗೆ ಪ್ರಾತ್ಯಾಪ ಮಾಡುತ್ತಾ, ಹೆಚ್ಚು ಹಿಡುವಳಿ ಇರತಕ್ಕ ರೈತರು, ತಮ್ಮ ಹಿಡುವಳಿಯನ್ನು ಇನ್ನೂ ಹೆಚ್ಚು ಮಾಡಿಕೊಳ್ಳುವ ದುರುದ್ದೇಶದಿಂದ ಸರ್ಕಾರದ ಜಮೀನುಗಳಲ್ಲಿ ಆಕ್ರಮಸಾಗುವಳಿಯನ್ನು ಯಾರು ಮಾಡಿದ್ದಾರೆ ಅಂಥವರಿಗೆ ನಾವು ಪುರಸ್ಕಾರ ಕೊಡಬಾರದು, ಉತ್ತೇಜನ ಕೊಡಬಾರದು, ಅವಕ್ಕೆ ಬದಲು, ಜಮೀನನ್ನು ಅವರಿಂದ ತೆಗೆದುಕೊಂಡು, ಅದನ್ನು ಜಮೀನು ಇಲ್ಲದೇ ಇರುವವರಿಗೆ ಹಂಚತಕ್ಕದ್ದು ಈ ಮನೂದೆಯ ಉದ್ದೇಶ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಅವರಲ್ಲಿ ಹೇಳಬಯಸುವುದೇ ನೆಂದರೆ, ಅನೇಕ ಜನ ಬಡ ರೈತರೂ, ಸ್ವತ್ರಾಂ ಜಮೀನು ಇಲ್ಲದೇ ಇರತಕ್ಕವರು, ಮತ್ತು ಕಡಮೆ ಹಿಡುವಳಿ ಇರತಕ್ಕವರು ಕೆಲವರು ಸರ್ಕಾರದ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಮತ್ತೆ ಕೆಲವರು, ಅವರ ಜಮೀನಿಗೆ ಅನುಕೂಲವಾಗಿ, ಆ ಜಮೀನಿನ ವ್ಯವಸಾಯ ಉತ್ತಮ ರೀತಿಯಲ್ಲಿ ಆಗಬೇಕಾದಾಗ ಸ್ವಲ್ಪ ಭೂಮಿಯನ್ನು ಒತ್ತುವರಿ ಮಾಡಬೇಕಾದ ಪ್ರಸಂಗ ಬಂದು, ಒತ್ತುವರಿ ಮಾಡಿಕೊಂಡಿದ್ದಾರೆ. ಇಂಥಾ ಜನಗಳಿಗೆ ಈ ಮಸೂದೆ ಮಾರಕವಾಗಬಾರದು, ಬಡ ಜನತೆಗೆ ಇದರಿಂದ ತೊಂದರೆಯಾಗಬಾರದು ಎಂಬುದೇ ನನ್ನ ಕಳಕಳಿ. 1968ನೇ ಇಸವಿಯ ಹಿಂದೆ ಯಾರು ಆಕ್ರಮ ಸಾಗುವಳಿ ಮಾಡುತ್ತಿದ್ದರೊ ಅಂಥವರಿಗೆ ಮಾಲೀಕತ್ವದ ಹಕ್ಕನ್ನು ಎಷ್ಟೋ ಸಂದರ್ಭದಲ್ಲಿ ಕೊಟ್ಟಾಗಿದೆ. ಈಗ ಅಲ್ಪಸ್ವಲ್ಪ ಮಾತ್ರ ಉಳಿದು ಕೊಂಡಿದ್ದಾರೆ. ಆದುದರಿಂದ 1968ನೇ ಇಸವಿಯೊಂದಿಗೆ ಪಹಣಿಯ ತಾರೀಖನ್ನು ಅದರ ಹಿಂದಿನ ತಾರೀಖಿಗೆ ಬರೆಸಿ, ದೇಶದ ಆಸ್ತಿಯನ್ನು ಕಬಳಿಸತಕ್ಕ ವರ್ಗದ ಜನ ಯಾರು ಇದ್ದಾರೆ, ಅವರನ್ನು ಸಕ್ಷಹಿಟ್ಟಿ, ಅವರ ಮೇಲೆ ಕ್ರಮ ತರುಗಿಸುವುದು, ಸರ್ಕಾರದ ಮಟ್ಟಿಗೆ, ಬಹಳ ಕಷ್ಟತರವಾದ ಕೆಲಸವೆಂದು ನಾನು ಒಪ್ಪುವುದಿಲ್ಲ. ಸುಳ್ಳು ಪಹಣಿ ಬರೆಯುವುದು ಹೇಗೆ ಎಂಬುದನ್ನು ನಾನು ಪ್ರಾಸಂಗಿಕವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

SRI B. B. SAYANAK.—Mr. Deputy Speaker, I rise on a point of order. There is no quorum.

(Within a few seconds after ringing of the bell, some members came in and there was quorum.)

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದು ಹೇಗೆಂದರೆ, ಕೆಲವು ಜನ ಗ್ರಾಮ ಲೆಕ್ಕಿಗರು ಪಹಣಿ ತಿದ್ದುವುದಕ್ಕೆ ಅಂದರೆ. ನ್ಯಾಯವಾಗಿರುವುದನ್ನು ಅನ್ಯಾಯವಾದ ರೀತಿಯಲ್ಲಿ ಮಾರ್ಪಾಡು ಮಾಡುವುದಕ್ಕೆ ಸುಮಾರು 500 ರೂಪಾಯಿನಿಂದ ಸಾವಿರ ರೂಪಾಯಿಗಳವರೆಗೆ ದುಡ್ಡು ತೆಗೆದು ಕೊಳ್ಳುತ್ತಾರೆ. ಇದು ವಾಸ್ತವವಾಗಿ ನಡೆಯುತ್ತಾ ಇರುವ ವಿಷಯ. ಆ ತಿದ್ದುಪಡಿ ಅಂತಿಮ ವಾಗಿ ಪುರಸ್ಕಾರಕ್ಕೊಳಗಾಗುತ್ತದೆಯೇ ಅಥವಾ ತಿರಸ್ಕಾರಕ್ಕೊಳಗಾಗುತ್ತದೆಯೋ ಅದು ಟ್ರಿಬುನಲ್‌ಗೆ ಬಿಟ್ಟಿದ್ದು. ಹೀಗೆ ಪಹಣಿಯನ್ನು ತಿದ್ದುಪಡಿ ಮಾಡತಕ್ಕದ್ದು ರಾಜ್ಯದ ಎಲ್ಲಾ ಕಡೆಯೂ ನಡೆಯುತ್ತಿದೆ. ಒಂದು ವೇಳೆ, ಪಹಣಿಯಲ್ಲಾಗಿರುವ ತಿದ್ದುಪಡಿ ನ್ಯಾಯವಾಗಿದ್ದರೆ,

ಅದನ್ನು ನಾವು ಪುರಸ್ಕರಿಸಲೇಬೇಕಾಗುತ್ತದೆ. ಆದರೆ, ಯಾರು ವಾಸ್ತವವಾಗಿ ಸಾಗುವಳಿ ಮಾಡುತ್ತಿದ್ದಾರೆ ಆವರ ಹೆಸರನ್ನು ಪಹಣಿಯಲ್ಲಿ ಸೇರಿಸದೆ, ಯಾರು ವಾಸ್ತವವಾಗಿ ಸಾಗುವಳಿ ಮಾಡುತ್ತಾ ಇಲ್ಲ ಅವರ ಹೆಸರನ್ನು ಸೇರಿಸುವ ವ್ಯವಹಾರಗಳು ನಡೆಯುತ್ತಿವೆ. ಇದನ್ನು ತಡೆಗಟ್ಟುವ ಬೇಕಾದಲ್ಲಿ, ಬಹಳ ಬಿಗಿಯಾದ ಕ್ರಮವನ್ನು ಅವರ ಮೇಲೆ ಅನುಸರಿಸಬೇಕಾಗುತ್ತದೆ. 1968ರ ಹಿಂದಿನಿಂದಲೂ ನಾವು ಇದರಲ್ಲಿ ಸಾಗುವಳಿ ಮಾಡುತ್ತಿದ್ದೇವೆ. ಸರ್ಕಾರ ಆ ಜಮೀನನ್ನು ನಮಗೆ ಬಿಟ್ಟುಬಿಡಬೇಕೆಂದು, ಜಮೀನನ್ನು ಅಕ್ರಮ ಮಾಡಿಕೊಂಡವನು ಅರ್ಜಿ ಕೊಟ್ಟ. ಆ ಜಮೀನನ್ನು ಪಡೆದುಕೊಳ್ಳುವುದರಿಂದ ಈ ತಿದ್ದುಪಡಿ ಮಸೂದೆ ತಂದಿರುವುದಾಗಿ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ, ಈ ರೀತಿ ಸುಳ್ಳು ದಾಖಲೆಗಳನ್ನು ಯಾರು ಸೃಷ್ಟಿ ಮಾಡಿ ಕೊಂಡಿದ್ದಾರೆ, ಅಂಥವರನ್ನು ಪತ್ತೆ ಮಾಡುವುದು ಸರ್ಕಾರಕ್ಕೆ ಅಷ್ಟೇನೂ ಕಷ್ಟತರವಲ್ಲ; ದುಸ್ತರವಲ್ಲ ಎನ್ನುವುದು ನನ್ನ ಅಭಿಪ್ರಾಯ.

ಇನ್ನೂ ಕಡಿಮೆ ಜಮೀನು ಇದ್ದು ವತ್ತುವರಿ ಮಾಡಿಕೊಂಡಿರುವವರು, ಜಮೀನು ಇಲ್ಲದೇ ಇದ್ದು ಸರ್ಕಾರಿ ಜಮೀನನ್ನು ಅಕ್ರಮಿಸಿಕೊಂಡಿರುವವರು, ಹಿಡುವಳಿ ಜಮೀನಿನ ಪಕ್ಕದಲ್ಲಿ ತಮ್ಮ ಜಮೀನು ಕಡಿಮೆ ಇದ್ದು ವತ್ತುವರಿ ಮಾಡಿಕೊಂಡಿರುವವರು, ಇಂಥಹವರ ಜಮೀನುಗಳಿಗೆ ಯಾವುದೇ ವಿಧವಾದ ಧಕ್ಕೆ ಬರುವುದಿಲ್ಲ, ಎನ್ನುವ ರೀತಿಯಲ್ಲಿ ಅವರ ಬಗ್ಗೆ ನಡೆದುಕೊಳ್ಳುತ್ತೇವೆ, ಅವರಿಗೆ ರ್ಯಾಂಡ್ ಗ್ರ್ಯಾಂಟಿ ಕಮಿಟಿ ಮೂಲಕ ಮಂಜೂರು ಮಾಡಿಸುತ್ತೇವೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳುವುದಾದರೆ ಈ ತಿದ್ದುಪಡಿಗೆ ಸ್ವಾಗತ ಮಾಡುತ್ತೇನೆ. ಸುಮಾರು ವರ್ಷಗಳಿಂದ ವತ್ತುವರಿ ಮಾಡಿಕೊಂಡು ಈಗಾಗಲೇ ಅನುಭವಿಸಿಕೊಂಡು ಬರುತ್ತಿದ್ದಾರೆ, ಅಂತಹವರಿಂದ ಜಮೀನು ಬಿಡಿಸಿ ಕೊಂಡು ಇನ್ನೂ ಯಾರೋ ಪ್ರಭಾವಶಾಲಿಗಳಿಗೆ ಜಮೀನು ಕೊಡತಕ್ಕದ್ದು ಮಾಡಿದರೆ, ಖಂಡಿತವಾಗಿಯೂ ಸಹ ಸದುದ್ದೇಶದಿಂದ ತಂದಿರತಕ್ಕ ತಿದ್ದುಪಡಿಯ ಉದ್ದೇಶ ಈಡೇರುವುದಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಭೂಮಿಯನ್ನು ಹಂಚಿಕೆ ಮಾಡತಕ್ಕ ನಿಮಿತ್ತಗಳು ಏನು ಇವೆ. ಅವು ಹಾಲಿ ವತ್ತುವರಿ ಮಾಡಿಕೊಂಡಿರತಕ್ಕ, ಜಮೀನು ಇಲ್ಲದೇ ಇರುವವರು, ಕಡಿಮೆ ಹಿಡುವಳಿದಾರರು, ಕಡಿಮೆ ಜಮೀನು ಇದ್ದು ತಮ್ಮ ಪಕ್ಕದಲ್ಲಿದ್ದ ಜಮೀನು ವತ್ತುವರಿ ಮಾಡಿಕೊಂಡಿರುವವರಿಗೇ ಪಡೆಯುತಕ್ಕಂಥ ಆರ್ಡರನ್ನು ಕೊಡಬೇಕು. ಈ ತಿದ್ದುಪಡಿಯಿಂದ ಯಾವ ಒಂದು ಅಪಾಯವೂ ಆ ಒಂದು ವರ್ಗದ ಜನಕ್ಕೆ ಆಗುವುದಿಲ್ಲ ಎಂದು ಹೇಳಿದರೆ ನಾನು ಭಾಗಶಃ ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಅಥವಾ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಕಾರಣ ಏನು ಎಂದರೆ, ಇದರಲ್ಲಿ ಮೊದಲನೆಯದಾಗಿ ತಹಶೀಲ್ದಾರರವರ ಆಜ್ಞೆ ಮೇಲೆ ಅಸಿಸ್ಟೆಂಟ್ ಕಮೀಷನರ್‌ರವರಲ್ಲಿಗೆ ಅಪೀಲು ಹೋಗತಕ್ಕಂಥ ಅವಕಾಶವನ್ನು ಮಾಡಿದ್ದಾರೆ. ಇದರಿಂದ ಬಹಳ ಜನಕ್ಕೆ ಅನುಕೂಲವಾಗಿದೆ, ಕೇಲವು ಅಪೀಲುಗಳು ಡಿವಿಜನಲ್ ಕಮೀಷನರ್‌ರವರೆಗೂ ಬರಬೇಕಾದ ಸಂದರ್ಭ ಇದೆ, ಆದುದರಿಂದ ಇದು ಬಹಳ ಸ್ವಾಗತಾರ್ಹವಾದುದಾಗಿದೆ. ಎರಡನೆಯದು ಬಗರಹುಕುಂ ಸಾಗುವಳಿ ದುರ್ಬಾಧವನ್ನು ಬಹಳ ಜನ ಪಡೆಯುತ್ತಿದ್ದಾರೆ. ಯಾರು ತಮ್ಮ ಕಾನೂನಿನ ಅವಕಾಶವನ್ನು ಉಪಯೋಗಿಸಿಕೊಂಡು, ಪಹಣಿ ಬಗ್ಗೆರೆ ಬದಲಾಯಿಸಿಕೊಂಡು ವತ್ತುವರಿ ಮಾಡುತ್ತಿದ್ದರು ಅಂತಹವರನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಯಿತು. ಮಾನ್ಯ ಕೃಷ್ಣಪ್ಪನವರು ಹೇಳಿದರು, ಬಹಳ ಜನ ಅಕ್ರಮಣ ಸಾಗುವಳಿ ಮಾಡಿಕೊಂಡಿರುವವರು ಬಡವರು ಇದ್ದಾರೆ ಎಂದು. ಇದು ನಿಜ, ಇವರೆಲ್ಲರೂ ಕೂಡ ದರಖಾನ್ತು ರ್ಯಾಂಡ್ ಗ್ರ್ಯಾಂಟ್ ಮುಖಾಂತರ ಭೂಮಿ ಪಡೆಯುವುದಕ್ಕೆ ಸಾಧ್ಯವಿದೆ. ಒಂದು ಕಾರಣ ಎನು ಎಂದರೆ, ಅನೇಕ ಭೂಹೀನರೂ ಕೂಡ ಭೂಮಿ ಎಲ್ಲೂ ಇಲ್ಲದೇ ಇರುವವರು ಕೂಡ ಅಕ್ರಮಣ ಸಾಗುವಳಿ ಮಾಡಿಕೊಂಡು ಸುಮಾರು 8-10 ವರ್ಷಗಳಿಂದ ಟಿ. ಟಿ. ವಗ್ಗೆರೆ ಕಟ್ಟಿಕೊಂಡು ಬಂದರೂ ಸಹ ರೆಗ್ಯೂಲರೈಸೇಷನ್ ಆಗಿಲ್ಲ, ಮಂಜೂರು ಆಗಿಲ್ಲ. ರೆಕಾರ್ಡ್ ಮಾತ್ರ ದಪ್ಪಗಾಗುತ್ತಾ ಹೋಗುತ್ತದೆ. ಇದನ್ನು ತೆಗೆದುಹಾಕಿ, ನೇರವಾಗಿ ಈ ಜಮೀನು ಭೂಹೀನರಿಗೆ ಅಥವಾ ಸ್ಮಾರ್ ಹೋಲ್ಡರ್ಸ್ ಏನು ಇದ್ದಾರೆ, ಇವರಿಗೆ ದರಖಾಸ್ತು ಸಮಿತಿ ಮುಖಾಂತರ ಕೊಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ಸಲಹೆ

ಹೇಳುತ್ತೇನೆ. ನಮ್ಮ ಭಾಗದಲ್ಲಿ ದೊಡ್ಡವರ ಜೊತೆ ಸಣ್ಣವರು ಪೈಪೋಟಿ ಮಾಡುವುದಕ್ಕೆ ಆಗುವುದಿಲ್ಲ. ನಾಲ್ಕು ಎಕರೆ ಕೊಡುವುದಕ್ಕೆ ತಹಶೀಲ್ದಾರರವರಿಗೆ ಅಧಿಕಾರ ಕೊಟ್ಟಿದ್ದಾರೆ. ಅಪ್ರೊಪ್ರಿಯೇಷನ್‌ಗೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ, ಏಕೆಂದರೆ ಮಾನ್ಯ ಸಚಿವರನ್ನು ಒಂದು ಬಾರಿ ಕರೆದು ಕೊಂಡು ಹೋಗಿ ರೆಕಾರ್ಡುಗಳನ್ನು ತಪ್ಪಿಸುವ ಬಗ್ಗೆ ತೋರಿಸ ಬೇಕು. ಗುಮಾಸ್ತರಿಗೆ ಕೊಕ್ಕೆ ಹಾಕುವುದೇ ಒಂದು ಚಟ. ಆರ್ಜಿ ಹಾಕಿದಮೇಲೆ ಒಂದೆರಡು ಸಾರಿ ಓಡಾಡಲೇ ಬೇಕು, ಇಲ್ಲದೇ ಇದ್ದರೆ ಅವರಿಗೆ ಸಮಾಧಾನವಾಗುವುದಿಲ್ಲ. ಗುಮಾಸ್ತರು ಹಾಕಿದ ನೋಟುಗಳನ್ನು, ಡೆಪ್ಯೂಟಿ ಕಮೀಷನರ್‌ರವರಿಗೆ ತೋರಿಸುವುದಿಲ್ಲ, ಅಸಿಸ್ಟೆಂಟ್ ಕಮೀಷನರ್‌ರವರಿಗೆ ತೋರಿಸುವುದಿಲ್ಲ. ಅದುದರಿಂದ ಅಪ್ರೊಪ್ರಿಯೇಟ್ ಮಾಡತಕ್ಕ ಅಧಿಕಾರವು ಕೂಡ ಗ್ರಾಂಟಿಂಗ್ ಅಥಾರಿಟಿಗೆ ಇದ್ದರೆ ಸುಲುಭವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ದರಖಾನ್ತು ಸಮಿತಿಯವರು ತೀರ್ಮಾನ ಮಾಡಿದ್ದಾರೆ. ತೀರ್ಮಾನ ಮಾಡಿ ಒಂದು ವರ್ಷ ಎರಡು ವರ್ಷ ಮೂರು ವರ್ಷ ಆದರೂ ಆಗುವುದಿಲ್ಲ. ಗ್ರಾಂಟ್ ಆಗಿರುತ್ತದೆ ದುಡ್ಡುಕೊಟ್ಟಿರುತ್ತಾರೆ, ಸಾಗುವಳಿ ಕೊಟ್ಟಿರುವುದಿಲ್ಲ. ಇದನ್ನು ಒಬ್ಬರೇ ಮಾಡಿದರೆ, 6 ತಿಂಗಳು ವರ್ಷ ಕೂಡ ಆಗುವುದಿಲ್ಲ. ಕಾನೂನಿನ ಮುಖಾಂತರ ದುರಾರ್ಭ ಪ್ರಕ್ರಿಯೆತ ಕ್ಯಂಥಾವನ್ನು ತಪ್ಪಿಸುವುದಕ್ಕೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಉದಾಹರಣೆ ಹೇಳುತ್ತೇನೆ, ಕಾನೂನನ್ನು ತಪ್ಪಾಗಿ ಅರ್ಥ ಮಾಡಿಕೊಂಡು ಅವರನ್ನು ನಮ್ಮನೆ ಓಡಾಡಿಸುವುದು. ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ನಾನ್ ಅಗ್ರಿಕಲ್ಚರರ್ ಪರ್‌ಪಸ್‌ಗೆ ಈ ಜಮೀನನ್ನು ಕೊಡುವುದಕ್ಕೆ ಸರ್ಕಾರ ಅವಕಾಶ ಮಾಡಿದೆ. ಸರ್ಕಾರದವರು ಒಂದು ಸಾರಿ ಜಮೀನನ್ನು ಕೊಡುತ್ತಾರೆ, ಲ್ಯಾಂಡ್ ಗ್ರಾಂಟ್ ರೂಲ್ಸ್ ನಲ್ಲಿ ಪ್ರೊವಿಶನ್ ಇದೆ, ಜಮೀನನ್ನು ಬೇರೆಯವರಿಗೆ ಗೇಣಿ ಕೊಡಬಾರದು, ಮಾರಾಟ ಮಾಡ ಬಾರದು ಎಂದು. ಕಾರ್ಖಾನೆ ಹಾಕುವುದಕ್ಕೋ, ಮತೊಂದು ಕಟ್ಟುವುದಕ್ಕೋ ಷೆಡ್ಯೂಲ್ ಬ್ಯಾಂಕ್ ಅಥವಾ ಕಮರ್ಷಿಯಲ್ ಬ್ಯಾಂಕ್‌ಗೆ ಮಾರ್ಟ್‌ಗೇಜ್ ಮಾಡಬಹುದು ಎಂದು ಅಷ್ಟೆಯಲ್ಲ ಇದೆ, Lessee shall not sub-let land or alienate it ಎಂದು ಈ ಕಂಡೀಷನ್ಸ್ ಹಾಕಿವ್ವಾರೆ. ಗ್ರಾಂಟ್ ಮಾಡಿಸಿಕೊಳ್ಳಬೇಕಾದರೆ ಆ ಪರವೇಶಿ ಇಲ್ಲಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಬರಬೇಕು. ಮತ್ತೆ ಅದು ವಾಪಸ್ಸು ಹೋಗುತ್ತದೆ. ಬ್ಯಾಂಕಿನವರು ಈ ಕ್ಲಾಸನ್ನು ಎಕ್ಸಾಮಿನ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಎಲನೇಟ್ ಮಾಡಬಾರದು ಎನ್ನತಕ್ಕದ್ದು, ಖಾಸಗೀ ಜನರಿಗೆ ಮಾರಾಟ ಮಾಡಬಾರದು, ಗೇಣಿ ಕೊಡಬಾರದು ಎಂದು ನಾನು ಅಗ್ರಿಕಲ್ಚರರ್ ಲ್ಯಾಂಡನ್ನು ಫೈನಾನ್ಸಿಯರ್ ರೆಕಗನೈಪ್ಡ್ ಇನಿಸ್ಟಿಟ್ಯೂಷನ್‌ಗೆ ಆಧಾರ ಮಾಡಿ ಕೊಡಬೇಕಾಗುತ್ತದೆ. ಈ ರೀತಿ ಮಾಡಿದರೆ ಬಂದೋಬಸ್ತು ಆಗುವುದಿಲ್ಲ. ಅನಾವಶ್ಯಕವಾಗಿ ರೂಲ್ಸ್‌ನಲ್ಲಿ ಇಂತಹ ಕಂಡೀಷನ್ಸ್ ಇರುತ್ತವೆ. ನಾನು ಒಂದೆರಡು ಕೇಸಿನಲ್ಲಿ ಸ್ವತಃ ನೋಡಿರತಕ್ಕದ್ದು ಇದು, ಇದರಿಂದ ಇವತ್ತು ಜಮೀನನ್ನು ಮುಂಜೂರು ಮಾಡತಕ್ಕದ್ದು ಅನಾವಶ್ಯಕವಾಗಿ ವಿಳಂಬವಾಗುತ್ತಿದೆ. ಜಮೀನು 50 ಪರ್ಸೆಂಟ್ ರಿನರ್ವ್ ಇದೆಯೇ ಎಂಬುದನ್ನು ನೋಡಿಕೊಂಡು ಅನಗತ್ಯವಾದ ನ್ಯೂನತೆ ಗಳು ಏನಿವೆ ಅವುಗಳನ್ನು ತಪ್ಪಿಸುವುದಕ್ಕೆ ಗಮನಕೊಡಬೇಕು.

4-00 P.M.

ಅವರು ಇದನ್ನು ಹುಡುಕುವುದು ಕಷ್ಟ ಇದೆ. ಈಪೊತ್ತು ಬಹಳ ಜನ ಬಡವರು ಇದ್ದಾರೆ. ಆತನಿಗೆ ೧೫೦ ರೂಪಾಯಿ ಕೆಳಗೆ ವರಮಾನ ಇದ್ದರೆ ಅವನು ಬಡವನು ಅಂತ ಕಂಡುಬಂದರೆ ಅವನಿಗೆ ಲ್ಯಾಂಡ್ ಗ್ರಾಂಟ್ ಮಾಡತಕ್ಕಂಥ ಅಧಿಕಾರ ಮತ್ತು ೧೦೦ಕ್ಕೆ ೭೫ ಭಾಗದಷ್ಟು ಅವನಕ್ಕೆ ರೆಮಿಷನ್ ಕೊಡಬಹುದು ಅಂತ ಕಾನೂನು ಇದೆ. ಆದರೆ ಇದರಲ್ಲಿ ಒಂದು ವಿಷಯ ಏನೆಂದರೆ ಈ ರೆಮಿಷನ್ ಕೊಡ ಬೇಕಾದರೆ ಅವರ ರಿಕಾರ್ಡ್ ಬಿಲ್ಟ್ ಆಪ್ ಆಗಿ, ಅವನ ಅರ್ಹತ ಆಧಾರದ ಮೇಲೆ ಅವನಿಗೆ ರೆಮಿಷನ್ ಕೊಡಬಹುದು ಅಂತ ಆದರೆ ಅವನಿಗೆ ಲ್ಯಾಂಡ್ ಗ್ರಾಂಟ್ ಕೊಡತಕ್ಕಂಥಾ ಸಂದರ್ಭದಲ್ಲಿ ಈ ರೆಮಿಷನ್ ಕೂಡ ಮಾಡಿದರೆ ಆಗುವುದಿಲ್ಲವೇ ? ಏತಕ್ಕೆ ನಾನು ಈ ಮಾತು ಹೇಳುತ್ತಿದ್ದೇನೆ ಎಂದರೆ ಆ ಬಡವನು ಇದರ ಬಗ್ಗೆ ಏನಾದರೂ ರೆಮಿಷನ್ ಪಡೆಯಬೇಕಾದರೆ ಆತನು ಮೊದಲು ಆರ್ಜಿ ಹಾಕಬೇಕು ಅದು ಅಲ್ಲಿಂದ ಮೇಲಕ್ಕೆ, ಮೇಲಿಂದ ಕೆಳಕ್ಕೆ ಹೋಗಿ ಸುತ್ತಾಡಿಕೊಂಡು ಬರುವ ತನಕ ಅವನಿಗೆ ಎಷ್ಟು ತೊಂದರೆ ಯಾಗಬಹುದು, ಯೋಚನೆ ಮಾಡಿ. ಒಬ್ಬ ಬಡ ಹರಿಜನರಿಗೆ ಜಮೀನು ಇಲ್ಲದೇ ಇರತಕ್ಕಂಥಾವರೇ

ಆಗಲಿ ಅಥವಾ ಅವನಿಗೆ ಒಂದು ಎಕರೆ ಜಮೀನೇ ಇರಲಿ ಅವನು ಅಲ್ಲಿಂದಿಲ್ಲಿಗೆ ಓಡಾಡಿಕೊಂಡು ಈ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಅವನಿಗೆ ದಂಡ್ಲು ಕೊಡುವುದಕ್ಕೆ ಸಾಧ್ಯವಿಲ್ಲ. ಅವನಿಗೆ ಏಕಕಾಲದಲ್ಲೇ ಗ್ರಾಂಟ್ ಮತ್ತು ರೆವಿಷನ್ ಮಾಡುವುದಾದರೆ ಅವನಿಗೆ ಓಡಾಡುವುದು ತಪ್ಪುತ್ತದೆ ಎಂದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ಕೆಲವು ವಿಚಿತ್ರಗಳನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು ಎಲ್ಲೆಲ್ಲಿ ದರಖಾಸ್ತಿಗೆ ಹೆಚ್ಚು ಅರ್ಜಿಗಳು ಬಂದಿವೆಯೋ ಅಂಥಾ ಕಡೆ ತಾವೇ ಖುದ್ದಾಗಿ ನೋಡಿ ಸ್ಥಳದಲ್ಲೇ ಕೂತುಕೊಂಡು ಇಂಥಾ ಸಮಸ್ಯೆಗಳನ್ನು ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಂಡರೆ ಪರವಾಯಿಲ್ಲ. ವಿಧಾನಸೌಧದಲ್ಲಿ, ಸೆಕ್ರೆಟೇರಿಯೇಟ್‌ನಲ್ಲಿ ಕೂತುಕೊಂಡು ಆಲೋಚನೆ ಮಾಡಿದರೆ ಈ ಸಮಸ್ಯೆಗಳು ಬಗೆಹರಿದಂತಾಗುವುದಿಲ್ಲ. ಇಷ್ಟು ಹೇಳಿ ನಾನು ಈ ಶಾಸನಕ್ಕೆ ಬೆಂಬಲ ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ನಂಜಪ್ಪ (ಅರಸೀಕೆರೆ).— ಸನ್ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರೆವಿನ್ಯೂ ಬಗ್ಗೆ ತಂದಿರತಕ್ಕಂಥಾ ಈ ತಿದ್ದುಪಡಿ ಮಸೂದೆಗೆ ನಾನು ವಿರೋಧವನ್ನು ವ್ಯಕ್ತಪಡಿಸುತ್ತಾ ಇದರ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ನಮ್ಮ ರೆವಿನ್ಯೂ ಸಚಿವರು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾವರು ರೈತರ ಕುಟುಂಬಕ್ಕೆ ಸೇರಿದಂಥವರು ಮತ್ತು ಯಾವ ಯಾವ ಸಂದರ್ಭದಲ್ಲಿ ಎಂತೆಂತಹ ಸಂದರ್ಭದಲ್ಲಿ ಈ ಭೂಮಿಗಳು ವತ್ತುವರಿಯಾಗುತ್ತದೆ ಅನ್ನುವುದನ್ನು ಚೆನ್ನಾಗಿ ತಿಳಿದುಕೊಂಡಿರತಕ್ಕಂಥಾವರು ಅಂಥಾವರು ಈ ತಿದ್ದುಪಡಿಯನ್ನು ತಂದಿರತಕ್ಕದ್ದು ನೋಡಿದರೆ ಯಾವುದೋ ಒಂದು ಪ್ರಭಾವದಿಂದ ತಂದಿದ್ದಾರೆ ಅಂತ ಹೇಳಬೇಕಾಗುತ್ತದೆ ಅಥವಾ ಒಂದು ಪಕ್ಷಪಾತ ಮನೋಭಾವದಿಂದ ಇದನ್ನು ತಂದಿದ್ದಾರೆ ಅಂತ ಹೇಳಬೇಕಾಗುತ್ತದೆ. ಇದರಲ್ಲಿ ಒಂದು ವಿಷಯ ಏನೆಂದರೆ ೧೯೬೬ನೇ ಇಸವಿಯಿಂದೀಚೆಗೆ ಭೂಮಿಯನ್ನು ವತ್ತುವರಿ ಮಾಡಿಕೊಂಡಂಥಾವರಿಗೆ ರೆಗ್ಯುಲರೈಸ್ ಮಾಡಿ, ಅವರಿಗೆ ಆ ಭೂಮಿಯನ್ನು ಮಂಜೂರು ಮಾಡಿ ಆಲ್ಲಿಂದೀಚೆಗೆ ಭೂಮಿಯನ್ನು ವತ್ತುವರಿ ಮಾಡಿಕೊಂಡಂಥಾವರಿಗೆ ರೆಗ್ಯುಲರೈಸ್ ಮಾಡದೇಹೋದರೆ ಇದು ಪಕ್ಷಪಾತ ಮನೋಭಾವ ಅಂತಲೋ ಅಥವಾ ಯಾವುದೋ ಒಂದು ಪ್ರಭಾವದಿಂದಲೋ ಇದನ್ನು ಮಾಡಿದ್ದಾರೆ ಎಂದು ಹೇಳಬೇಕಾಗಿದೆ. ಸಾಮಾನ್ಯವಾಗಿ ಕಾನೂನನ್ನು ವಿರೋಧಿಸಿ ಅಥವಾ ಕಾನೂನನ್ನು ಮುರಿದು ನಡೆದುಕೊಳ್ಳತಕ್ಕಂಥಾವರು ಸ್ವಲ್ಪ ಶ್ರೀಮಂತ ವರ್ಗಕ್ಕೆ ಸೇರಿದವರು ಮತ್ತು ಪ್ರಭಾವಶಾಲಿಗಳು. ಅಂಥಾವರು ೧೯೬೬ನೇ ಇಸವಿಯ ಮುಂಚೆ ಈ ಕಾನೂನನ್ನು ಮುರಿದು ತಮ ಪ್ರಭಾವವನ್ನು ಬೀರಿ ತಮಗೆ ಬೇಕಾದಷ್ಟು ಜಮೀನನ್ನು ವತ್ತುವರಿ ಮಾಡಿಕೊಂಡು ಮತ್ತು ಸರ್ಕಾರದ ಒಂದು ಆಶ್ರಯದಿಂದ ಅದನ್ನು ರೆಗ್ಯುಲರೈಸ್ ಮಾಡಿಸಿಕೊಂಡು ಉಪಯೋಗ ಮಾಡಿಕೊಂಡಿದ್ದಾರೆ ಆದರೆ ೧೯೬೬ನೇ ಇಸವಿಯಿಂದ ಈಚೆಗೆ ಮಾಡಿದಂಥಾವರು ಅಲ್ಪ ಸ್ವಲ್ಪ. ಉಳಿದ ಭೂಮಿ ಏನು ಇದೆ ಅದನ್ನು ಕೂಲಿಯಿಂದ ಜೀವನ ಮಾಡತಕ್ಕಂಥ ಬಡವರು ಒಂದು ಎಕರೆ, ೨ ಎಕರೆ, ೩ ಎಕರೆಯನ್ನು ವತ್ತುವರಿ ಮಾಡಿಕೊಂಡು ಅದರಲ್ಲಿ ಸಾಗು ಮಾಡಿಕೊಂಡು ಏನೋ ತಮ್ಮ ಜೀವನವನ್ನು ಮಾಡಿಕೊಳ್ಳುತ್ತಿದ್ದಾರೆ ಅಷ್ಟೇ ಅಲ್ಲ ಅವರು ಆ ಜಮೀನನ್ನು ತಮಗೆ ಮಂಜೂರು ಮಾಡಿಕೊಡಬೇಕೆಂದು ಅರ್ಜಿಗಳನ್ನೂ ಕೂಡ ಹಾಕಿ ತಾಲ್ಲೂಕು ಆಫೀಸಿಗೆ ಸುತ್ತಿ ಸುತ್ತಿ ಸಾಕಾಗಿದ್ದಾರೆ ಆ ಭೂಮಿ ಅವರಿಗೆ ಇನ್ನೂ ಮಂಜೂರಾಗಿಲ್ಲ ಮತ್ತು ಹಣವೂ ದೊರಕಿಲ್ಲ ಏತಕ್ಕೆಂದರೆ ಅವರು ಅಂತಹ ಹೆಚ್ಚು ಪ್ರಭಾವಶಾಲಿಗಳಲ್ಲ ಮತ್ತು ಇನ್‌ಫ್ಲುಯೆನ್ಸ್‌ನಿಂದ ಆ ಭೂಮಿಯನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಅವರಿಗೆ ಅಷ್ಟು ಶಕ್ತಿಯೂ ಇಲ್ಲ. ಇಂತಹ ದುರದೃಷ್ಟಶಾಲಿಗಳು ಈವೊತ್ತು ಇದ್ದಾರೆಂದು ನಾನು ತಿಳಿದಿದ್ದೇನೆ. ಅಂಥಾವರಿಗೆ ಈ ಭೂಮಿಯನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ಅವರ ಭೂಮಿಯನ್ನು ಹೇಗೆ ಮಾಡಿಕೊಳ್ಳುತ್ತೇವೆ ಎಂದರೆ ಇದಕ್ಕಿಂತಲೂ ಕರುಳಿಲ್ಲದ ತಿದ್ದುಪಡಿ ಬೇರೊಂದು ಇಲ್ಲ ಎಂದು ಮಾನ್ಯ ರೆವಿನ್ಯೂ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ ಯಾರು ೨ ಎಕರೆ, ೩ ಎಕರೆ, ೪ ಎಕರೆ ಒಳಪಟ್ಟು ಇಟ್ಟುಕೊಂಡಿರುತ್ತಾರೋ ಅವರು ಅದನ್ನು ಸಾಗು ಮಾಡಿಕೊಂಡು ಜೀವನ ನಡೆಸುತ್ತಾ ಹೋಗಲಿ ಅವರಿಂದ ಆ ಜಮೀನನ್ನು ಕಿತ್ತುಕೊಳ್ಳಬಾರದು ಎಂದು ಹೇಳುತ್ತೇನೆ. ೧೯೬೬ನೇ ಇಸವಿಯಿಂದ ಈಚೆಗೆ ಏನು ಜಮೀನನ್ನು ವತ್ತುವರಿ ಮಾಡಿಕೊಂಡಿದ್ದಾರೆ ಅದೂ ಕೂಡ ರೆಗ್ಯುಲರೈಸ್ ಆಗಬೇಕು ಮತ್ತು ಅವರಿಗೆ ಆ ಭೂ ಒಡೆತನ ಸಿಕ್ಕಬೇಕು ಇಲ್ಲದೇ ಹೋದರೆ ಇದು ಒಂದು ಕರಾಳ ತಿದ್ದುಪಡಿ ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ಕುಟುಂಬಕ್ಕೆ ಸಾಕಾದಷ್ಟು ಭೂಮಿ ಇಲ್ಲದೆ ಅಂದರೆ ಆತನಿಗೆ ೫ ಎಕರೆ ಭೂಮಿ ಇದ್ದು ೬-೧೦ ಜನ ಮಕ್ಕಳು ಇದ್ದರೆ ಆತ ಬಹಳ ಬಡವನಾಗಿದ್ದರೆ ಅವನಿಗೆ ರಿಯಾಯಿತಿ ತೋರಿಸಿಕೊಡಬೇಕು. ಮತ್ತು ಅಂಥಾವರು ಆ ಭೂಮಿಯನ್ನು ವತ್ತುವರಿ ಮಾಡಿ

ಕೊಂಡರೂ ಕೂಡ ಅವರು ವಶಪಡಿಸಿಕೊಂಡಿರತ್ಕಂಥಾ ಭೂಮಿಯನ್ನು ಅವರಿಗೇ ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗದೆ ಈ ಎರಡು ವಿಷಯಗಳನ್ನೂ ಕೂಡ ತಾವು ಗಮನದಲ್ಲಿಟ್ಟುಕೊಂಡು ಈ ಅಮೆಂಡ್‌ಮೆಂಟ್‌ನಲ್ಲಿ ಅಂಥಾವರಿಗೆ ಸ್ವಲ್ಪ ರಿಯಾಯಿತಿ ತೋರಿಸುವುದು ಸೂಕ್ತ ಅಂತ ಹೇಳಿ ಇಷ್ಟು ಮಾತನಾಡುವುದಕ್ಕೆ ಅಧ್ಯಕ್ಷರು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ ವಿ. ಕಕ್ಕಿಲಾಯ (ಬಂಟವಾಳ) — ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಂದಿರ ತಕ್ಕಂಥಾ ಮಸೂದೆಗೆ ನಾನು ಹೃತ್ಪೂರ್ವಕವಾಗಿ ಸ್ವಾಗತ ಬಯಸುತ್ತೇನೆ. ಸ್ವಾಮಿ, ಬಡವರ ಹೆಸರಿನಲ್ಲಿ ಕಾನೂನುಗಳನ್ನು ಮಾಡಿ ಶ್ರೀಮಂತರಿಗೆ ಸಹಾಯ ಮಾಡುವಂಥಾ ಒಂದು ಆಕ್ಟ್ ಏನು ಇತ್ತೋ ಅದು ಈ ದಿವಸ ನಿಂತು ಬಂದಿದೆ. ಅವರಿಂದಾಗುವ ತೊಂದರೆಗಳನ್ನು ತಪ್ಪಿಸುವುದಕ್ಕೋಸ್ಕರ ಮಾನ್ಯ ಸಚಿವರು ಇಂಥಾ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ನಿಜವಾಗಿಯೂ ಆರ್ಹತೆ ಇರತಕ್ಕಂಥಾವರು ಏನೂ ಜಮೀನು ಇಲ್ಲದೇ ಇರತಕ್ಕಂಥಾವರು ಅಥವಾ ತಮ್ಮ ಒಂದು ಜಮೀನಿಗೆ ಅವಶ್ಯಕವಾಗಿ ನೀರಿನ ಆಶ್ರಯ ಮಾಡುವುದಕ್ಕೆ ತಮ್ಮ ಒಂದು ಜಮೀನಿನಲ್ಲಿ ಕೆರೆಯೋ ಬಾವಿಯೋ ಮಾಡತಕ್ಕಂಥಾವರಿಗೆ ಇದರಿಂದೇನೂ ತೊಂದರೆಯಾಗುವುದಿಲ್ಲ ಮತ್ತು ಈ ಬಗ್ಗೆ ಏನಾದರೂ ತೊಂದರೆ ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತರುವುದಕ್ಕೂ ಕೂಡ ಇದರಿಂದೇನೂ ಆತಂಕವಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಭೂಮಿ ಕೇಳತಕ್ಕಂಥಾ ಜನ ಬಹಳ ಹೆಚ್ಚು. ಆದರೆ ನಮ್ಮ ರಾಜ್ಯದಲ್ಲಿ ಭೂಮಿ ಇರತಕ್ಕಂಥಾದ್ದು ಬಹಳ ಕಡಿಮೆ. ಜಮೀನನ್ನು ಪತ್ತುವರಿ ಮಾಡಿಕೊಂಡಂಥಾ ಜನ ಬಡವನಾಗಿರುತ್ತಾನೋ ಆತನಿಂದ ಕಿತ್ತು ಇನ್ನೊಬ್ಬರಿಗೆ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಇದರಿಂದ ಆಗುತ್ತದೆ. ಇದು ಸರಿಯೇ ?

ಶ್ರೀ ಬಿ ವಿ. ಕಕ್ಕಿಲಾಯ.—ಕಳೆದ ಕೆಲವು ವರ್ಷಗಳಿಂದ ಈಚೆಗೆ ಏನಾಗಿದೆ ಎಂದರೆ ಸ್ವಂತ ಜಮೀನು ಇದ್ದವರಿಗೂ ಕೂಡ ಈ ರೀತಿಯಾಗಿ ಪತ್ತುವರಿ ಜಮೀನು ಇದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ವಿಚಾರ ಹೇಳುವುದಾದರೆ ಒಬ್ಬನಿಗೆ ಅವನ ಸ್ವಂತದ್ದೇ ೧೬ ಎಕರೆ ಜಮೀನು ಇದೆ ಇದಲ್ಲದೆ ದಂಖಾಸ್ತು ಜಮೀನೂ ಕೂಡ ಅವನು ಎಷ್ಟು ಜಮೀನು ಮಾಡಿಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಿ ಕೊಂಡಿದ್ದಾನೆ. ಮುಂದೂ ಕೂಡ ಪತ್ತುವರಿ ಮಾಡಿಕೊಳ್ಳುತ್ತಾನೆ. ಇವೆಲ್ಲಾ ರಿಟೀರ ಮೊದಲು ಮಾಡಿರುವಂಥಾ ಜಮೀನುಗಳು. ಮುಂದೆ ಈ ರೀತಿ ಮಾಡಿಕೊಳ್ಳುವುದಾದರೆ ಪ್ರಪಂಚದಲ್ಲಿ ಯಾವ ಉತ್ಪಾದನೆಗೂ ಕೂಡ ಜಮೀನು ಸಿಕ್ಕುವುದಿಲ್ಲ ಎಂದು ನನಗೆ ಅನಿಸುತ್ತದೆ ನಮ್ಮ ಜಿಲ್ಲೆಯ ಪರಿಸ್ಥಿತಿ ನೋಡಿದರೆ ಇದನ್ನು ತಪ್ಪಿಸಲೇ ಬೇಕು. ಯಾವ ವ್ಯಕ್ತಿ ಈ ಜಮೀನು ಪತ್ತುವರಿ ಮಾಡಿಕೊಂಡಿದ್ದಾನೋ ಅವನಿಗೆ ಒಂದು ಸೀಲಿಂಗ್ ಹಾಕಿದ್ದರೂ ಕೂಡ ಅವನಿಗೆ ಎಷ್ಟೋ ಜಮೀನು ಇರಲಿ ಸರ್ಕಾರೀ ಜಮೀನನ್ನು ತನ್ನದು ಎಂತ ಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಪ್ರಭಾವ ಬೀರಿ ಲಂಚ ಕೊಟ್ಟು ತನ್ನದು ಅಂತ ಜಮೀನು ಮಾಡಿಕೊಂಡಿದ್ದಾನೆ ಈಪೊತ್ತು. ಆತನ ಕಾರ್ಡ್‌ನಲ್ಲಿ ದಾಖಲೆ ಪತ್ರದಲ್ಲಿ ನೋಡಿದರೆ ಅವನಂತಯೇ ಇದೆ ಆತನಿಗೆ ಬೇಕಾದಷ್ಟು ಜಮೀನು ಇದ್ದರೂ ಕೂಡ ಅವನಂತೆಯೇ ಮಾಡಿಸಿ ಕೊಂಡಿದ್ದಾನೆ. ಇದರಿಂದ ಆತನಿಂದ ಬೇರೆಯವರಿಗೆ ಕೊಡಲಿಕ್ಕು ಕೂಡ ಸಾಧ್ಯ ಇಲ್ಲದೇ ಇರುವ ರೀತಿಯಲ್ಲಿ ಬಂದಿದೆ.

ಗೋಮಾಳಕ್ಕೆ ಜಾಗ ಇಲ್ಲದಂತೆ ಆಗಿದೆ ಮತ್ತು ಬೇರೆ ಸಾರ್ವಜನಿಕ ಉಪಯೋಗಕ್ಕೆ ಸ್ಥಳ ಇಲ್ಲದಂತೆ ಆಗಿದೆ. ಈ ಒಂದು ಸ್ಥಿತಿ ಎಲ್ಲ ಜಿಲ್ಲೆಗಳಲ್ಲಿಯೂ ಬಂದಿದೆ; ಆದಕಾರಣ ಈ ಒಂದು ಅಧಿಕಾರ ಸರ್ಕಾರಕ್ಕೆ ಇರುವುದು ಅಗತ್ಯವಾಗಿದೆ. ಮುಂದೆ ಬಡವರು ಯಾರಾದರೂ ಈ ತಿದ್ದುಪಡಿಯ ಪ್ರಕಾರ ಭೂಮಿ ಕಳೆದುಕೊಂಡರೆ, ಅಂತಹವರಿಗೆ ಸರ್ಕಾರದ ಜಮೀನನ್ನು ಕೊಡಬಹುದು; ಅದಕ್ಕಾಗಿಯೇ ದರಖಾಸ್ತು ಕಮಿಟಿ ಇದೆ; ಆ ಕಮಿಟಿಯವರು ಈ ಜನರ ಬಗ್ಗೆ ಸೂಕ್ತ ಗಮನ ಕೊಟ್ಟಿದ್ದೇ ಆದರೆ ಈ ಒಂದು ತಿದ್ದುಪಡಿಯಿಂದ ಬಡ ಜನರಿಗೆ ಯಾವ ಆತಂಕವೂ ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ಪ ಏನಾದರೂ ಆತಂಕಗಳು ಬಂದರೆ, ಬಡವರಿಗೆ ಇದರಿಂದ ಏನಾದರೂ ತೊಂದರೆಯಾಗುವುದಾದರೆ, ಅವರಿಗೆ ಸರ್ಕಾರದ ಜಮೀನನ್ನು ಅಂದರೆ ಗೋಮಾಳಕ್ಕೆ ಮತ್ತು ಸಾರ್ವಜನಿಕರ ಉಪಯೋಗಕ್ಕೆ ಬೇಕಾದ ಜಮೀನನ್ನು ಇಟ್ಟುಕೊಂಡು ಉಳಿದಿದ್ದನ್ನು ಹಂಚುವುದಕ್ಕೆ ಹಿಂಜರಿಯಬಾರದೆಂದು ನಾನು ಹೇಳುತ್ತೇನೆ. ಮುಖ್ಯವಾಗಿ ಈ ತಿದ್ದುಪಡಿ ತರಲು

ಕಾರಣವಿತ್ತು ಎಂದರೆ ಜಮೀನು ಇರುವವರೇ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಂಡು ಬಂದಿದ್ದರು; ಅದನ್ನು ತಪ್ಪಿಸುವ ಸಲುವಾಗಿ ಈ ರೀತಿ ಮಾಡಿದ್ದಾರೆ. 1968ಕ್ಕೆ ಮೊದಲು ಯಾರು ಯಾರು ಸರ್ಕಾರದ ಜಮೀನನ್ನು ಅಕ್ರಮಣ ಮಾಡಿದ್ದಾರೋ, ಅಂತಹ ಜಮೀನನ್ನು ಅವರಿಗೇ ಕೊಡಬೇಕೆಂಬ ಬಗ್ಗೆ ಒಂದು ತಿದ್ದುಪಡಿಯನ್ನು ರೆವಿನ್ಯೂ ಆಕ್ಟ್‌ಗೆ ಈ ಮೊದಲು ಮಾಡಲಾಯಿತು; ಆ ಒಂದು ತಿದ್ದುಪಡಿಯಿಂದ ಇಷ್ಟೆಲ್ಲಾ ತೊಂದರೆಗಳು ಉಂಟಾಗಿರುವುದು; ಅದನ್ನು ಹೋಗ ಲಾಡಿಸಲು ಈ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ದಕ್ಷಿಣಕನ್ನಡ ಜಿಲ್ಲೆಯ ಪಶ್ಚಿಮಘಟ್ಟದ ತಪ್ಪಲಿನಲ್ಲಿ ಅನೇಕ ಮಂದಿ ಹತ್ತಾರು ವರ್ಷಗಳಿಂದ ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ಅಂದರೆ ಅರಣ್ಯ ಇಲಾಖೆಗೆ ಸೇರಿದ್ದನ್ನು ಮತ್ತು ರೆವಿನ್ಯೂ ಇಲಾಖೆಗೆ ಸೇರಿದ್ದನ್ನು ಅಕ್ರಮಣ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಮತ್ತು ಇಂದು ಅಲ್ಲಿ ಅವರು ತಮ್ಮ ಒಂದು ಸಾಮ್ರಾಜ್ಯವನ್ನೇ ಸ್ಥಾಪನೆ ಮಾಡಿದ್ದಾರೆ. ಈ ಅಂಶವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿದುಕೊಳ್ಳಬೇಕು. ಇವೇ ರೀತಿ ಒತ್ತುವರಿ ಮಾಡಲು ಬಿಟ್ಟರೆ ಮುಂದೆ ಬಡ ವರಿಗೆ ಜಮೀನು ಸಿಗುವುದಿಲ್ಲವೆಂಬ ಕಾರಣದಿಂದ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ. ಕೆಲವು ಶ್ರೀಮಂತರು ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಳ್ಳುವುದರ ಮೂಲಕ ದೊಡ್ಡದೊಡ್ಡ ತೋಟಗಳನ್ನು ಮಾಡಿಕೊಂಡಿದ್ದಾರೆ ಮತ್ತು ತಮ್ಮ ಪ್ಲಾನ್‌ಟೇಷನ್‌ಗಳನ್ನು ವಿಸ್ತೀರ್ಣ ಮಾಡಿಕೊಳ್ಳುವ ಸಲುವಾಗಿ ಯಾವ ರೀತಿಯಿಂದ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ತಿಳಿದುಕೊಂಡರೆ, ಈ ಒಂದು ತಿದ್ದುಪಡಿಗೆ ತಮ್ಮ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ಆದರೆ ಇಂದು ಯಾರಾದರು ಬಡವರುಸರ್ಕಾರದ ಜಮೀನಿನಲ್ಲಿ ೫ ಸೆಂಟ್ಸ್, ಹತ್ತು ಸೆಂಟ್ಸ್ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡಿದ್ದರೆ, ಇಲ್ಲವೇ ಮನೆ ಕಟ್ಟಿಕೊಂಡಿದ್ದರೆ, ಅಂತಹ ಜಾಗಗಳನ್ನು ಅವರಿಗೇ ಖಾಯಂಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಅಂತಹವರನ್ನುಅಲ್ಲಿಂದ ಹೊರಹಾಕುವುದು ತಮಗೂ ಇಷ್ಟವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ ಬಡವರು ಅಕ್ರಮಣ ಮಾಡಿರುವ ಸರ್ಕಾರೀ ಜಾಗವನ್ನು ಅವರಿಗೇ ದರಖಾನ್ತು ಕಮಿಟಿ ಮೂಲಕ ಖಾಯಂ ಮಾಡಬೇಕು; ಅದಕ್ಕೆ ಈ ಕಾನೂನು ಅಡ್ಡ ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ ಆ ರೀತಿ ಏನಾದರೂ ಕಾನೂನ ಅಡ್ಡ ಬಂದರೆ ಅದಕ್ಕೂ ಒಂದು ತಿದ್ದುಪಡಿ ಮಾಡಬೇಕು ಮತ್ತು ದೊಡ್ಡ ಜಮೀನು ದಾರರು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಸರ್ಕಾರವ ಸ್ವಾಧೀನಕ್ಕೆ ತೆಗೆದುಕೊಳ್ಳ ಬೇಕೆಂದು ಹೇಳಿ, ಈ ತಿದ್ದುಪಡಿಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ಸೂಚಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರುವ ಈ ತಿದ್ದುಪಡಿ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುವಾಗ ಅವರಿಗೆ ಒಂದು ವಿಷಯದಲ್ಲಿ ನನು ಒಂದು ಸಮಸ್ಯೆ ಉದ್ಭವವಾಯಿತೋ, ಅದೇ ನಮಸ್ಯೆ ನಮಗೂ ಉದ್ಭವವಾಗಿದೆ. ಆದರೆ ಅದನ್ನು ಬಗೆಹರಿಸುವುದರಲ್ಲಿ ಮಾತ್ರ ಅವರಿಗೂ ನಮಗೂ ಸ್ವಲ್ಪ ಭೇದವಿದೆ. ಈಗ ಒತ್ತುವರಿ ವಿಷಯವನ್ನೇ ತೆಗೆದುಕೊಂಡರೆ ನಮ್ಮ ಜಿಲ್ಲೆಯಲ್ಲಿ ಆದರಲ್ಲೂ ನಮ್ಮ ತಾಲ್ಲೂಕಿನಲ್ಲಿ ತೆಗೆದುಕೊಂಡರೆ, ಕೆಲವರು ಇದ್ದಾರೆ, ಅವರಿಗೆ ಸ್ವಲ್ಪ ಅವಕಾಶ ಕೊಟ್ಟರೂ ಸಾಕು, ಇಡೀ ಭೂಮಂಡಲವನ್ನೇ ಬೇಕಾದರೆ ಒತ್ತುವರಿ ಮಾಡು ತ್ತಾರೆ; ನಮ್ಮ ಭೂಮಿ ದುಂಡಗೆ ಇದೆ; ಅವರಿಗೆ ಇದೇ ರೀತಿ ಒತ್ತುವರಿ ಮಾಡಲು ಅವಕಾಶ ಕೊಟ್ಟಿದ್ದೇ ಆದರೆ ನಾಳೆ ಬಡವರಿಗೆ ಭೂಮಿ ಸಿಗುವುದೇ ಕಷ್ಟವಾಗಿ ಬಿಡುತ್ತದೆ. ನಮ್ಮ ಮಾನ್ಯ ಮಂತ್ರಿಗಳು ಆಗಾಗ್ಗೆ ಶಂಗೇರಿಗೆ ಬರುತ್ತಾರೆ, ಆದರೆ ನಮ್ಮ ಕತೆ ಮಾತ್ರ ಬರುವುದಿಲ್ಲ; ಅವರಿಗೆ ನಮ್ಮ ಮಲೆನಾಡಿನ ಒಂದು ವೈಶಿಷ್ಟ್ಯ ಹೇಳಬೇಕೆಂದರೆ, ಅಲ್ಲಿ ಗುಡ್ಡಗಾಡು ಪ್ರದೇಶಗಳು ಜಾಸ್ತಿ; ಕೆಲವರು ಆ ಗುಡ್ಡಗಳಿಗೆ ಪರಂಗಿಪಟ್ಟೆ ಹೊಡೆದುಕೊಂಡು ಕುಳಿತಿದ್ದಾರೆ. ಆದರೆ ಅದರ ಒಳಗಡೆ ನೋಡಿದರೆ ಹಸನಾಗಿ ಭೂಮಿಯನ್ನು ಸಾಗುವಳಿ ಮಾಡಿಕೊಂಡುರುವುದು ಕಾಣಬರುತ್ತದೆ. ಇಂತಹವರಿಂದ ಆ ಭೂಮಿಯನ್ನು ಬಿಡಿಸಿ ಅದನ್ನು ಬಡವರಿಗೆ ಒಂದು, ಅಥವಾ ಎರಡು ಎಕರೆಗಳನ್ನು ಕೊಟ್ಟರೂ ಸಾಕು, ಅವರು ತಲೆತಲಾಂತರದವರೆಗೆ ತಮ್ಮ ಹೆಸರನ್ನು ಹೇಳಿಕೊಂಡು ಬದುಕುತ್ತಾರೆ. ಕೆಲವರು ಅಕ್ರಮ ಸಾಗುವಳಿ ಮಾಡಿರುವ ಜಮೀನಿಗೆ ಮುಳ್ಳಿನ ಬೇಲಿಯನ್ನು

ಹಾಕಿದ್ದಾರೆ. ಒಂದು ಮೊಲ ಕೂಡ ಒಳಗೆ ಪ್ರವೇಶ ಮಾಡದಂತೆ ಬೇಲಿ ಹಾಕಿದ್ದಾರೆ. ನಿಮ್ಮ ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಬಡವರಿಗೆ ಭೂಮಿ ಹಂಚುವುದು ಸಹ ಇದೆ ; ಆದರೆ ಇಂದು ಬಡವರಿಗೆ ಹಂಚಲು ಭೂಮಿಯೇ ಇಲ್ಲವಾಗಿದೆ, ಈಗ ಉಳಿದಿರುವುದು ಆಕಾಶ ಒಂದೆ ; ಆದಕಾರಣ ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಯಾರು ಅಕ್ರಮವಾಗಿ ಬೇಲಿ ಹಾಕಿಕೊಂಡು ಸರ್ಕಾರದ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ, ಅಂತಹವರಿಂದ ಅದನ್ನು ವಾಪಸ್ ಪಡೆದುಕೊಳ್ಳಬೇಕು, ಅವರು ಹಾಕಿರುವ ಬೇಲಿಯನ್ನು ಕೀಳಿಸುವುದಕ್ಕೆ ತಾವು ಧೈರ್ಯ ಮಾಡುವುದಾದರೆ ಮಾತ್ರ ಈ ತಿದ್ದುಪಡಿ ತಂದಿದ್ದಕ್ಕೂ ಸಾರ್ಥಕವಾಗುತ್ತದೆ. ಮತ್ತು ಅಂತಹವರಿಂದ ಭೂಮಿಯನ್ನು ಸರ್ಕಾರದ ವಶಕ್ಕೆ ತಗೆದುಕೊಂಡು ಭೂಹೀನರಿಗೆ ಕೊಡಬೇಕೇ ಹೊರತು, ಅದು ಬಿಟ್ಟು ಇನ್ನು ಉಳಿದಿರುವ ಭೂಮಿಯನ್ನು ಅಂದರೆ ಗುಡ್ಡ, ಬಂಡೆಗಳಿಂದ ಕೂಡಿದ ಭೂಮಿಯನ್ನು ನೀರಾನಿಲ್ಲದಿರುವ ಭೂಮಿಯನ್ನು ಬಡವರಿಗೆ ಕೊಟ್ಟರೆ ಆದರಿಂದ ಅವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ, ಯಾರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಅಂತಹವರಿಂದ ಜಮೀನು ಪಡೆದುಕೊಂಡು ಬಡವರಿಗೆ ಕೊಟ್ಟರೆ ಮಾತ್ರ ಈ ತಿದ್ದುಪಡಿಯಿಂದ ಸಾರ್ಥಕವಾಗುತ್ತದೆಂದು ಹೇಳುತ್ತೇನೆ. ಈಗ ಸರ್ಕಾರದವರು ಭೂಮಿ ಬಗ್ಗೆ ಸೀಲಿಂಗ್ ತಂದಿದ್ದಾರೆ. ಆದರೆ ಕೆಲವು ಬುದ್ಧಿವಂತರು, ಮಾನ್ಯ ಮಂತ್ರಿಗಳು ಬರಾಡ್ಯರು ಎಂದು ಹೇಳಿದರು. ಆಂತಹವರು, ಧನಾಡ್ಯರು ಮತ್ತು ಧೀಮಂತರು ಏನು ಮಾಡಿದ್ದಾರೆಂದರೆ, ದುಡ್ಡು ಇದ್ದರೆ ಏನು ಬೇಕಾದರು ಮಾಡಬಹುದು ಎಂಬುದಕ್ಕೆ ಇದನ್ನು ಹೇಳುತ್ತಿದ್ದೇನೆ, ಅವರುಗಳು ಈ ಭೂಸುಧಾರಣೆಯ ಬಗ್ಗೆ ಒಂದು ಉಪಾಯ ಹುಡುಕಿದ್ದಾರೆ. ಏನೆಂದರೆ, ಹತ್ತು ಜನ ಬಡವರ ಹತ್ತಿರ ಡಿಕ್ಲರೇಷನ್ ಕೊಡಿಸುತ್ತಾರೆ, ಟ್ರಿಬ್ಯುನರ್‌ನಲ್ಲಿ ಕೆಲಸ ಮಾಡುವ ನಮ್ಮಂತಹವರು ಕೂಡ ಅವರು ಬಡವರು ಪ್ರಾಮಾಣಿಕರು ಎಂಬ ಕಾರಣದಿಂದ ಜಮೀನನ್ನು ಪುಂಜೂರು ಮಾಡುತ್ತೇವೆ; ಆ ರೀತಿ ಮಾಡಿದಮೇಲೆ ನಿಜ ಸಂಗತಿ ನಮಗೆ ತಿಳಿಯುವುದು; ಏನೆಂದರೆ ಈ ಧೀಮಂತರು ಆ ಬಡಜನರ ಹತ್ತಿರ ಮೊದಲೇ ನಾವು ಮಂಜೂರು ಮಾಡುವ ಜಮೀನಿನ ಬಗ್ಗೆ ಪವರ್ ಆಫ್ ಅಟಾರ್ನಿಯನ್ನು ಬರೆಸಿ ಇಟ್ಟುಕೊಂಡಿರುತ್ತಾರೆ, ಆದರ ಒಂದು ಆಧಾರದ ಮೇಲೆ ಅವರಿಗೆ ಕೊಟ್ಟ ಜಮೀನನ್ನು ತಾವು ಪಡೆದುಕೊಂಡು ಆ ಜನರಿಗೆ ಗೇಟ್ ಪಾಸು ಕೊಡುತ್ತಾರೆ, ಆ ಜನರನ್ನು ಗಡಿ ದಾಟಿಸಿದ ಮೇಲೆ ಆ ಜಮೀನನ್ನು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳುತ್ತಾರೆ. ಇಂತಹ ಅನೇಕ ಘಟನೆಗಳು ನಮ್ಮ ಒಂದು ಅನುಭವದಲ್ಲಿ ಬಂದಿವೆ. ಬಡವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸರ್ಕಾರದವರು ಚಾಪೆ ಕೆಳಗೆ ನುಸಿಯಲು ಪ್ರಯತ್ನ ಮಾಡಿದರೆ, ಕೆಲವು ಜನರು ರಂಗೋಲೆ ಕೆಳಗೆ ನುಸಿಯಲಿಕ್ಕೆ ಪ್ರಯತ್ನ ಮಾಡುತ್ತಾರೆ. ಇದನ್ನು ಸಹ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಬಡವರಿಗೆ ನ್ಯಾಯವಾಗಿ ದೊರಕಬೇಕಾದುದನ್ನು ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ನಂಜಪ್ಪನವರು ತಮ್ಮ ಭಾಷಣದಲ್ಲಿ ಮೊದಲು ಏನು ಹೇಳಿದರು, ಅದನ್ನು ನಾನೂ ಸಹ ಒಪ್ಪುತ್ತೇನೆ. 1968ನೇ ಇಸವಿಗಿಂತ ಇತ್ತೀಚೆಗೆ ಭೂಮಿಕಾಣಿ ಇಲ್ಲದ ಯಾರಾದರೂ ಒಂದರಿಂದ ೫ ಎಕರೆವರೆಗೆ ಬೇರೆ ಮಾರ್ಗವಿಲ್ಲದೆ ಸರ್ಕಾರದ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದರೆ, ಅವರುಗಳ ಕುಟುಂಬವರ್ಗದವರು ಅದನ್ನೇ ನಂಬಿಕೊಂಡಿದ್ದರೆ ಮತ್ತು ಅವರಿಗೆ ಬೇರೆ ಉತ್ಪಾದನೆ ಇಲ್ಲವೆಂಬುದು ರುಜುವಾತಾದರೆ, ಅಂತಹ ಬಡವರಿಗೆ ಅದೇ ಜಮೀನನ್ನು ಖಾತೆ ಮಾಡಿಸಿಕೊಡುವುದಕ್ಕೆ ತಾವು ಸೂಕ್ತ ಕ್ರಮ ಕೈಕೊಳ್ಳಬೇಕು. ಇದನ್ನು ಮಾನವೀಯ ದೃಷ್ಟಿಯಿಂದ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯವಾದ ಅಂಶವೆಂದರೆ, ಈಗ ಯಾರಾದರು ದರಖಾಸ್ತು ಜಮೀನಿಗೆ ಅರ್ಜಿ ಹಾಕಿದರೆ ಅದನ್ನು ದರಖಾಸ್ತು ಕಮಿಟಿಯವರು ಪರಿಶೀಲನೆ ಮಾಡಿ, ಸೂಕ್ತವೆಂದು ಕಂಡು ಬಂದರೆ, ಅದನ್ನು ಮಂಜೂರು ಮಾಡಿಸುತ್ತಾರೆ, ಆದರೆ ಸಂಬಂಧಪಟ್ಟವರಿಗೆ ಸಾಗುವಳಿ ಚೀಟಿ ಸಿಗುವುದು ಅವರ ಮಕ್ಕಳ ಕಾಲಕ್ಕೋ ಅಥವಾ ಮೊಮ್ಮಕ್ಕಳ ಕಾಲಕ್ಕೋ ಎಂದು ಹೇಳಬಹುದು, ಇದಕ್ಕೆ ಕಾರಣ ಆ ಅರ್ಜಿ ಸರ್ಕಾರದ ನಾನಾ ಇಲಾಖೆಗಳಿಗೆ ಹೋಗಬೇಕಾಗಿದೆ. ಸರ್ವೆ ಇಲಾಖೆಗೆ ಹೋಗಬೇಕು, ಅಲ್ಲಿಂದ ಅದು ಅರಣ್ಯ ಇಲಾಖೆಗೆ ಬಂದರೆ ಅದು ಕಾಡಿನ ಮುಳ್ಳು ಸಿಕ್ಕಿದಂತೆ ಎಂದು ಹೇಳಬಹುದು, ಅರಣ್ಯ ಇಲಾಖೆಯವರು ಆ ಕಾಡನ್ನು ಕಡಿದ ನಂತರವೇ ಅದನ್ನು ಮುಂದಕ್ಕೆ ಕಳುಹಿಸುವುದು;

ನಾನು ಒಂದು ಉದಾಹರಣೆ ಕೊಡಬೇಕು ಎಂದರೆ ನಾನು ಶಾಸನಕನಾವ ಮರ್ಷ ನನ್ನ ಕ್ಷೇತ್ರದಲ್ಲಿ ನನ್ನ ಗುರುಗಳಾದ ಶ್ರೀ ಮಾನ್ ಗೋಪಾಲಗೌಡರು ಇದ್ದಾಗ ಒಂದು ದರಖಾನ್ತ ಅರ್ಜಿಯನ್ನು ಕೊಟ್ಟು ಮಂಜೂರಾದರೂ ಕೂಡ ಅವನಿಗೆ ಸಾಗುವಳಿ ಚೀಟಿ ಇನ್ನು ಸಿಕ್ಕಿಲ್ಲ ಎಂದರೆ ಮಾನ್ಯ ಸಚಿವರು ಇದನ್ನು ಗಮನಿಸಬೇಕು ಆ ಕಡೆ ಈ ಕಡೆಯಿಂದ ಡ್ರಾಪಿಡ ಪ್ರಣಾಯಮ ದರಖಾನ್ತ ಕಮಿಟಿಯಲ್ಲಿ ನಾವು ಇರುವುದಿಲ್ಲ, ಸರ್ವೇಯರ್ ಮತ್ತು ಡಿ. ಎಫ್. ಓ. ಇರುತ್ತಾರೆ. ಜೊತೆಗೆ ಮ್ಯಾಪ್ ಇಟ್ಟುಕೊಂಡು ನೋಡಿ ಕೇಸನ್ನು ಬಿಲ್ಡ್ ಅಪ್ ಮಾಡುತ್ತಾರೆ. ಅದರಲ್ಲಿ ಏನಾಗಿದೆ ಎಂದರೆ ದೊಡ್ಡವರು ದುಡ್ಡಿರುವವರು ಯಾರು ಇರುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿ ಕೊಳ್ಳುವುದೇನೆಂದರೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯಲ್ಲಿ ತೀರ್ಮಾನವಾದ 8 ದಿವಸಗಳಲ್ಲಿ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಂಜೂರಾತಿಯ ಬಗ್ಗೆ ಹೇಳಬೇಕಾದರೆ ಯಾವ ಬಡಬಗ್ಗರಿಗೆ ನುತ್ತು ಹರಿಜನಗಿರಿಜನರಿಗೆಂದು ಭೂಮಿಯನ್ನು ಕೊಡುತ್ತಿರೋ ಅದೆಲ್ಲಾ ಪರಬಾರೆಯಾಗಿದೆ. ಅದನ್ನು ಬಹಳ ಜನ ದೊಡ್ಡವರು ಹೊಡೆದುಕೊಂಡಿದ್ದಾರೆ. ಯಾರು ಮುಳಗಡೆಯಾಗಿ ತೊಂದರೆಗೆ ಸಿಕ್ಕಿಕೊಂಡಿದ್ದರೋ ಅವರ ಹೆಸರಿನಲ್ಲಿ ಬಂದಿದ್ದ ಜಮೀನನ್ನು ಕೂಡ ಲಪಟಾಯಿಸಿದ್ದಾರೆ. ಶರಾವತಿ ಮುಳಗಡೆ ಸಮಯದಲ್ಲಿ ಆಲ್ಲಿದ್ದವರೆಲ್ಲರೂ ಬಿಕ್ಕಾಪಾಲಾಗಿದ್ದಾರೆ. ಅಂಥ ಘಟನೆಗಳು ಇವೆ. ಮಾನ್ಯ ಸಚಿವರು ಮಾತನಾಡುವಾಗ ಬಲಾಢ್ಯರು ಎಂದು ಏನು ಹೇಳಿದರು ಅಂಥವರು ಮಾಡಿರುವ ಕೆಲಸ ಇದು. ಇದು ಯಾವ ಬಡವರು ಮಾಡುವ ಕೆಲಸವಲ್ಲ. ಅವರಿಗೆ ದುಡ್ಡು ಎಲ್ಲಿದೆ ?

ಒಬ್ಬ ಸದಸ್ಯರು.—ಅಂಥವರ ಮೇಲೆ ಏನಾ ಕ್ರಮ ಏತಕ್ಕೆ ತಗೆಕೊಳ್ಳಬಾರದು ?

ಶ್ರೀ ಕೋಣಂದೂರು ಲಿಂಗಪ್ಪ.—ಅಂಥವರ ಮೇಲೆ ಏನಾ ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಶಿವಮ್ಯೂನವರು, ಮಾನ್ಯ ರಾಚಮ್ಯೂನವರು ಅಂಥವರು ಮಾಡಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಆದರೆ ಅವರು ಮಾಡಿಲ್ಲ, ಉದಾಹರಣೆಗೆ ಹೇಳಿದೆ.

ಶ್ರೀ ಎನ್. ರಾಚಯ್ಯ:—ಮಾನ್ಯ ಕೋಣಂದೂರುಲಿಂಗಪ್ಪನವರು ನನ್ನ ಬಗ್ಗೆ ಮಾತನಾಡಿದರೆ ನಾನು ಹೇಳ ಬೇಕಾಗುತ್ತದೆ ತಾವು ಏನು ಹೇಳಿವಿರಿ ಯಾವರೀತಿ ಮಾಡಿವಿರಿ ಎನ್ನುವುದನ್ನು ನೋಡಿದ್ದೇನೆ ನನಗೆ ಗೊತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ:—ನಾನು ತಮಗೆ ಏನೂ ಹೇಳಿಲ್ಲಿಉದಾಹರಣೆಗೆ ತಮ್ಮನ್ನು ಮಾನ್ಯ ಶಿವಯ್ಯನವರು ಹೇಳಿದೆ ಆದರೆ ನನ್ನ ಬಗ್ಗೆ ತಾವೇನಾದರು ಹೇಳುವುದಾದರೆ ನಾನು ಅಗ್ನಿ ಪರೀಕ್ಷೆಗೂ ತಯಾರಿದ್ದೇನೆ, ಸರ್ಕಾರ ಏನು ಸಹಾಯ ಮಾಡಬೇಕು ಎಂದು ಹಿಂದುಳಿವರಿಗೆ ಮತ್ತು ಹರಿಜನಗಿರಿಜನರಿಗೆ ಕೊಟ್ಟರೋ ಅದನ್ನು ಬಲಾಢ್ಯರು ಹಡೆದುಕೊಂಡು ಬಡವರ ಹೊಟ್ಟೆಮೇಲೆ ಹೊಡೆದಿದ್ದಾರೆ. ಅಂಥ ಜನರನ್ನು ಹಿಡಿಮ ಅಂಥವರ ಮೇಲೆ ಸೂಕ್ತ ಕ್ರಮ ತೆಗದುಕೊಳ್ಳುವ ಜನ ಯಾರಿದ್ದಾರೆ ಏನು ಕ್ರಮತಗೆದುಕೊಳ್ಳುವುದಕ್ಕೆ ಸಾಧ್ಯ ಅದನ್ನು ತೆಗೆದುಕೊಳ್ಳಲೇ ಬೇಕು ಎಂದು ಕೇಳಿಕೊಳ್ಳುತ್ತೇನೆ ಇನ್ನೊಂದು ಅಪಾಯ ಇವೆ ಮಾನ್ಯ ಹುಚ್ಚಮಾಸ್ತಿಗೌಡರು ಯಾವುದೋ ತಾತನ ಕಾಲದಿಂದ ಅನುಭವಿಸಿಕೊಂಡು ಬಂದಂತಹ ಜಮೀನು ಇದ್ದರೆ ಅದಕ್ಕೆ ಒಂದು ಡಿಕ್ಲರೇಷನ್ ಕೊಟ್ಟು ದರಖಾಸ್ತು ಹಾಕುವಂತ ಜನರು ಇದ್ದಾರೆ ನಮ್ಮ ಜಮೀನನ್ನು ನೀವು ನ್ಯಾಂತ ಮಾಡುತಿದ್ದಾರೆ ಈ ರೀತಿ ಮಾಡಿದರೆ ಅನ್ಯಾಯವಲ್ಲವೇ ಇದನ್ನು ಸೂಕ್ಷ್ಮವಾಗಿ ನೋಡಬೇಕು.

ಶ್ರೀ ಎನ್. ರಾಚಯ್ಯ:—ನನ್ನ ಅಭಿಪ್ರಾಯ ತೆಗೆದುಕೊಳ್ಳುವುದಾದರೆ ಎಲ್ಲರನ್ನೂ ಬಿಡಿಸಿ ಸರ್ಕಾರಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ:—ವೈಯಕ್ತಿಕವಾಗಿ ನ್ಯಾಂತ ಹಕ್ಕು ಇವೆಲ್ಲಾ ನ್ಯಾಲ್ಪ ಮಿತಿಯಲ್ಲಿ ಇಟ್ಟಿದೆ ಹೋದರೆ ಪ್ರಜಾಪ್ರಭುತ್ವ ಮತ್ತು ನ್ಯಾತಂತ್ರ ಎನ್ನುವುದರಲ್ಲಿ ಅರ್ಥ ಇರುವುದಿಲ್ಲ ನಮಗೆ ಇದು ಐತಿಹಾಸಿಕವಾದಂತಹ ಸಿದ್ಧಾಂತ ಈ ನಾಡಿನಲ್ಲೇ ಬೆಳೆದು ಬೇರು ಬಡಬೇಕೆಂದು ಬೆಳೆಮ ಬಂದಿರುವವರು ನಾವು ಕುಂದಲದಲ್ಲಿ ಬೆಳೆಮ ಕುಂದಲದಲ್ಲಿಯೇ ಇದ್ದುಕೊಂಡು ಅಧಿಕಾರ ಮಾಡಬೇಕೆಂದು ಬಂದವರಲ್ಲ. ಯಾವ ಜನ ಬಡಜನರಿಗಾಗಿ ನಾವು ಹೋರಾಡುತ್ತೆವೆಂದು ಹೇಳಿ ಬಂದಂತ ಜನ ಬಡ ಜನರನ್ನು ವಂಚನೆಮಾಡಿ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ ಅಂಥವರ ಮೇಲೆ ಉಗ್ರ ಕ್ರಮ ತಗೆದುಕೊಳ್ಳ ಬೇಕೆಂದು ಹೇಳುತ್ತೇನೆ ಇನ್ನ ಅಧಿಕಾರಿಗಳ ಬಗ್ಗೆ ಒಳ್ಳೆಯ ಅಧಿಕಾರಿಗಳು ಇದ್ದಾರೆ

ಬೇಕಾದರೆ ಅವರ ಹೆಸರು ಹಿಡಿದು ಅಂಥವರನ್ನು ನಾವು ಹೊಗಳಲು ತಯಾರಿದ್ದೇವೆ. ಆದರೆ ಅಂತ ಹವರು ಬಹಳ ಜನ ಇಲ್ಲ ಯಾರು ಬ್ರಷ್ಟಾಚಾರಿಗಳು ಯಾರು ಲಂಚಕೋರರು ಇದ್ದಾರೆ ಅಂಥವರಿಗೆ ಅವರು ಏನು ಮಾಡಿದರು ಯಾವ ತೊಂದರೆಯೂ ಇಲ್ಲ, ಕಾರಣವಾವರು ಇಷ್ಟೆ ಕೆಲವು ಪ್ರಭಾವ ಶಾಲಿಗಳನ್ನು ಉಪಯೋಗಿಸಿಕೊಂಡು ಅವರು ಪ್ರೊಪೋಷನ್ ಇನ್‌ಕ್ರಿಮೆಂಟ್‌ಗಳನ್ನು ಪಡೆದು ಕೊಂಡು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇದ್ದಾರೆ ಅವರಿಗೆ 30 ವರ್ಷ ಸರ್ವಿಸ್ ಆದರೆ ನಮಗೆ 5 ವರ್ಷಗಳು ಮಾತ್ರ.

ಶ್ರೀ ಎಸ್. ಎಂ ಶ್ರೀರಾಳಿ ಚಂದ್ರಶೇಖರ್.— ಹಾಗಾದರೆ ನಿಮಗೂ 30 ವರ್ಷ ಸರ್ವಿಸ್ ಹಾಕಿ ಕೊಡಬೇಕೆಂದು ಹೇಳುತ್ತೀರಾ.

ಶ್ರೀ ಕೊಣಂದೂರು ಲಿಂಗಪ್ಪ — ನಾವು 30 ವರ್ಷವು ಬರುತ್ತೇವೆ ಅದರಲ್ಲಿ ನಮಗೆ ಯಾವ ಅನುಮಾನವಿಲ್ಲ ಇದು ಕೇವಲ ಕೆಲವೇ ವರ್ಗಗಳು ಇರುವುದರಿಂದ ಮುಖ್ಯವಾಗಿ ಯಾರಿಗೂ ಯಾವ ರೀತಿಯಿಂದಲೂ ಕಿರುಕುಳ ಆಗದೆ ಇರುವ ರೀತಿಯಲ್ಲಿ ಇದನ್ನು ಮಾಡಬೇಕೆಂದು ಕೇಳಿ ತಾವು ತಂದಿರತಕ್ಕ ತಿದ್ದುಪಡಿಯನ್ನು ನೂರಕ್ಕೆ ನೂರು ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶ್ರೀಕಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿಯನ್ನು ಬೆಂಬಲಿಸಿ ಎರಡು ಮಾತನ್ನು ಹೇಳಲು ಇಷ್ಟ ಪಡುತ್ತೇನೆ ಮಾನ್ಯ ಲಿಂಗಪ್ಪನವರು ಇಷ್ಟು ಒಳ್ಳೆಯ ತಿದ್ದುಪಡಿಯನ್ನು ತಂದಿದ್ದರೂ ಕೂಡ ಅವರು ಇದಕ್ಕೆ ಬೆಂಬಲ ಸೂಚಿಸುವ ವ್ಯವಧಾನವನ್ನು ಹೊಂದಿಲ್ಲವೆಂದು ವ್ಯಸನವಾಗುತ್ತದೆ 58 ರಲ್ಲಿ ಜಮೀನಿಲ್ಲದೆ ಯಾರು ಯಾರು ಇದ್ದಾರೆ ಅಂಥವರೆಲ್ಲಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕಿದರು ಅವರ ಅರ್ಜಿಗಳೆಲ್ಲಾ ಇನ್ನು ಅಫೀಸುಗಳಲ್ಲೆ ಇವೆಯೆಂದು ಹೇಳಿದರೆ ತಪ್ಪಾಗಲಾರದು ತಾವು ಧಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕೆಂ ಎಂದು ಕೇಳಿಕೊಳ್ಳುತ್ತೇನೆ. ಇವತ್ತಿಗೂ ಅನೇಕ ಸಾರಿ ಅರ್ಜಿ ಹಾಕಿದ್ದಾರೆ ಕೂಡ ಅವನಿಗೆ ಭೂಮಿ ಸಿಕ್ಕಿರುವುದಿಲ್ಲ ಯಾರು ಭೂಮಿಯನ್ನು ಉಳಿಮೆ ಮಾಡಿಕೊಂಡು ಬಂದಿದ್ದಾರೆ ಅಂಥವರ ಹತ್ತಿರ ಸರಿಯಾದ ದಾಖಲೆಗಳು ಇರುವುದಿಲ್ಲ ಅದನ್ನು ಒದಗಿಸತಕ್ಕಂಥ ಸಾಮರ್ಥ್ಯ ಅವರಿಗೆ ಇರುವುದಿಲ್ಲ. ಅವರಿಗೆ ಕೊಡುವುದು ಕಷ್ಟವಾಗುತ್ತದೆ ತಾವು ಏನು ಅರ್ಡಿನೆನ್ಸ್ ಹೊರಡಿಸಿದ್ದೀರಿ ಅದರಿಂದ ಒಂದು ವರ್ಗಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಅನೇಕ ಜನ ಹರಿಜನಗಿರಿಜನರು ಇದ್ದಾರೆ ಅವರು ಜಮೀನು ಮಾಡಿ ಕೊಂಡು ಇದ್ದರೂ ಕೂಡ ಅವರಿಗೆ ನೋಟೀಸ್ ಕೊಟ್ಟಿದ್ದಾರೆ ಅದನ್ನು ಬಿಡಿಸಬೇಕೆಂದು ನೋಟೀಸ್ ಬಂದಿವೆ ಅವನನ್ನು ತೆಗೆದುಕೊಂಡು ಪರದಾಡುತ್ತಿದ್ದಾರೆ.

4 30 P.M.

ಈ ದೃಷ್ಟಿಯಿಂದ ಅನೇಕ ಜನರು ಅದರಲ್ಲಿಯೂ ಸಣ್ಣ ಪುಟ್ಟ ರೈತರು ಜಮೀನನ್ನೇ ನಂಬಿಕೊಂಡು ಬಂದಿರತಕ್ಕವರು ಈಗ ಕಂಗಾಲಾಗಿದ್ದಾರೆ. ಇಂತಹ ಒಂದು ಪರಿಸ್ಥಿತಿಯನ್ನು ತಾವು ಗಮನಿಸಿ ಅವರಿಗೆ ಯಾವ ರೀತಿ ರಕ್ಷಣೆ ಕೊಡಬೇಕೆಂಬುದನ್ನು ಕೂಡಲೇ ವಿಚಾರ ಮಾಡಬೇಕು ಯಾವ್ಯಾವ ವರ್ಗದ ಪರು ಇದರಲ್ಲಿ ಉಪಯೋಗ ಪಡೆಯಬೇಕೆಂದು ಹೇಳಿದ್ದಾರೋ ಆ ವರ್ಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಏನೇನು ಕ್ರಮಗಳನ್ನು ತೆಗೆದುಕೊಂಡರು ಅದರಿಂದೇನೂ ಪರಿಣಾಮವಾಗುತ್ತಾ ಇಲ್ಲ. ಅದರ ಪರಿಣಾಮ ಸಣ್ಣ ಪುಟ್ಟ ರೈತರ ಮೇಲೆ ಆಗುತ್ತಾ ಇದೆ ಕೆಲವು ಶಾಸನಗಳ ಅರ್ಥ ಅರಿವು ರೈತರಿಗೆ ಆಗುತ್ತ ಇಲ್ಲ: ಅವರ ಒಂದು ಅನರಕ್ಷತೆಯಿಂದ ಅವರು ಶಾಸನದ ವಿಚಾರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕಾಗುವುದಿಲ್ಲ ನಮ್ಮ ಕಡೆ 15—20 ವರ್ಷಗಳಿಂದಲೂ ಬಗರು ಹುಕುಂ ಮಾಡಿಕೊಂಡು ಬಂದಿರತಕ್ಕವರೂ ಇದ್ದಾರೆ ಅಂತಹವರಿಗೆ ಕೂಡ ಇವತ್ತಿನವರಿಗೂ ಸಾಗುವಳಿ ಚೀಟಿ ಸಿಗಲಲ್ಲವೆಂದರೆ ಇದು ಬಹಳ ಶೋಚನೀಯವಾದ ಪರಿಸ್ಥಿತಿ ಇನ್ನೂ ದರಖಾಸ್ತುನಲ್ಲಿಯೂ ಕೂಡ ಎಷ್ಟೋ ಅರ್ಜಿಗಳು ತೀರ್ಮಾನವಾಗಿದ್ದರೂ ಕೂಡ ಅಂತಹವರಿಗೂ ಕೂಡ ಸಾಗುವಳಿ ಚೀಟಿಯನ್ನು ಇನ್ನೂ ಕೊಡಲಲ್ಲಿ ಅ ರೀತಿಯಾಗಿ ಸಾಗರ ಪರ್ವ ಅಫೀಸಿನಲ್ಲಿ ನೂರಾರು ಸಾವಿರಾರು ಕೇಸುಗಳು ಇನ್ನೂ ಪೆಂಡಿಂಗ್‌ನಲ್ಲಿವೆ. ಅವು ಯಾವಾಗ ಸರ್ವೆ ಆಗುತ್ತದೋ ಇನ್ನೂ ಗೊತ್ತಾಗಲ್ಲಿಲ್ಲ ಈಗ 20 ಅಂಶಗಳ ಕಾರ್ಯಕ್ರಮದ ಪ್ರಕಾರ ಯಾರಿಗೆ ಜಮೀನು ಇಲ್ಲವೋ ಅಂತಹವರಿಗೆ ಜಮೀ

ನುಗಳನ್ನು ಕೊಡುತ್ತೇವೆಂದು ಈಗಾಗಲೇ ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಇಂತಹ ಒಂದು ದೃಷ್ಟಿಯಲ್ಲಿ ಸರಿಯಾಗಿ ಕೆಲಸಮಾಡದೇ ಹೋದರೆ ನಾವು ಎಲ್ಲಿ ಹೊಗಬೇಕೋ ಗೊತ್ತಿಲ್ಲ ಈ ಮಾತನ್ನು ನಾನು ಬಿಲ್ಡಿಂಗ್ ಕಾರಿಗಳ ಮೀಟಿಂಗ್‌ನಲ್ಲಿಯೇ ಹೇಳಿದ್ದೇನೆ. ಕೆಲವರು ಜನಹಿತ ಸಾಧನೆ ಮಾಡುವ ಕಾರ್ಯಕ್ರಮದ ಬಗ್ಗೆ ನೇರವಾದ ಕ್ರಮಗಳನ್ನು ನಾವು ತಾಕಿಕೊಳ್ಳಬೇಕು ಮೊದಲು ಯಾರ್ಯಾರಿಗೆ ಸಾಗುವಳಿ ಚೀಟಿಗಳನ್ನು ಕೊಡಬೇಕೋ ಅವರಿಗೆ ಜಾಗ್ರತೆಯಾಗಿ ಕೊಡಬೇಕಾಗಿದೆ. ಏಕೆಂದರೆ ಸಾಗುವಳಿ ಚೀಟಿಗಾಗಿ ಹತ್ತಾರು ಆಫೀಸುಗಳಿಗೆ ಹೋಗಿ ತಿರುಗಾಡಬೇಕಾಗಿದೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಸರ್ವೆ ಡಿಪಾರ್ಟ್‌ಮೆಂಟ್ ಮುಂತಾದ ಆಫೀಸುಗಳಿಗೆ ಆ ಕಾಗದಗಳು ಹೋಗಬೇಕಾಗಿರುವುದು ಒಂದು ಕಂಬರ್‌ಸಂ ಪ್ರೊಸೀಜರ್ ಇದು ಸುತ್ತು ಬಳಸಿ ಕೂಂಡು ಬರತಕ್ಕೆ ಪದ್ಧತಿ. ಇದರಿಂದ ಅವನ ಜೀವನದಲ್ಲಿ ಸಾಗುವಳಿ ಚೀಟಿ ಸಿಗುತ್ತದೋ ಇಲ್ಲವೋ ಎಂಬ ಅನುಮಾನ ಬರುತ್ತದೆ ಇದಕ್ಕೆ ನೀವು ಉತ್ತರ ಕೊಡುವುದಕ್ಕೇ ಕಷ್ಟವಾಗುತ್ತದೆ. ಏಕೆಂದರೆ ನಮಗೆ ಇರುವ ಜಮೀನು ಬಹಳ ಸ್ವಲ್ಪವಾದರೂ ಅದೆಲ್ಲವೂ ಫಾರೆಸ್ಟ್ ಎಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ ಮಲೆನಾಡಿನಲ್ಲಿರತಕ್ಕ ಕೆಲವಾರು ತಾಲ್ಲೂಕುಗಳಲ್ಲಿ ಯೋಗ್ಯವಾದ ದರಖಾಸ್ತಿಗೆ ಕೊಡತಕ್ಕ ಜಮೀನು ಅವೇಲಬಲ್ ಆಗಿರುವುದು ಕೇವಲ 800 ಸಾವಿರ ಎಕರೆ ಮಾತ್ರ ಅದನ್ನು ಸರಿಯಾಗಿ ಹಂಚಬೇಕಾದರೆ ಇಲ್ಲದಸಲ್ಲದ ಅಡಚಣೆಗಳಿವೆ ಸರ್ಕಾರ ಈ ಕೆಲಸದಲ್ಲಿ ಪೆಷನೇಟಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಮಂತ್ರಿಗಳೂ ಸಹ ಚೆನ್ನಾಗಿ ತಿಳಿಯಬೇಕಾಗಿದೆ. ಮಾನ್ಯ ಮಂತ್ರಿಗಳು ದಗರ್ ಹುಕ್ಕುಂ ಮಾಡಿಕೊಂಡು ಬಂದಿರುವ ಸಣ್ಣ ಪುಟ್ಟ ರೈತರ ಬವಣೆಇವತ್ತು ಏನಾಗಿದೆಯೆಂಬುದನ್ನು ತಿಳಿಯಬೇಕು. ಹಿಂದಿನಿಂದಲೂ ದರಖಾಸ್ತ್ ಜಮೀನು ಏನು ಆವರಿಗೆ ಸಿಕ್ಕಿತ್ತೋ ಅದನ್ನು ಬದು ವರಿಗೂ ಮಾಡಿಕೊಂಡು ಬಂದಿದ್ದಾರೆ 1970—71ರಲ್ಲಿ ಪ್ರೊಪೋಸ್ಡ್ ಫಾರೆಸ್ಟ್ ಎಂದೇನು ಹೆಸರು ಇಟ್ಟುಕೊಂಡಿದ್ದಾರೋ ಆಂತಹವರಲ್ಲಿ ಅಕ್ಕಪಕ್ಕದಲ್ಲಿ ಫಾರೆಸ್ಟ್ ಲ್ಯಾಂಡ್ ಇಲ್ಲ ಅದನ್ನೇ ಆಗ ಆವರು ಪ್ರೊಪೊಸ್ಡ್ ಫಾರೆಸ್ಟ್ ಎಂಬುದಾಗಿ ಸೇರಿಸಿದರು 2½ಸಾವಿರ ಎಕರೆಯಷ್ಟು ಜಮೀನು ನನ್ನ ಒಂದು ತಾಲ್ಲೂಕಿನಲ್ಲಿದೆ ಅದಲ್ಲಿಯೂ ಫಾರೆಸ್ಟ್ ಲ್ಯಾಂಡ್‌ಅಲ್ಲ ರೆವಿನ್ಯೂಲ್ಯಾಂಡ್ ಸಹ ಅಲ್ಲ. ಅಂತಹ ಪ್ರೊಪೋಸ್ಡ್ ಫಾರೆಸ್ಟ್ ಲ್ಯಾಂಡ್‌ನಲ್ಲಿ ಅನೇಕರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅನೇಕಸಾರಿ ನಾನು ಇದರ ಬಗ್ಗೆ ಗಮನ ಸೆಳೆಯುವ ಸೂಚನೆಯ ಮೂಲಕ ನೋಟೀಸ್ ಕೊಟ್ಟಿದ್ದೇನೆ. ಅದಕ್ಕಾಗಿಯೇ ಕಂದಾಯ ಮಂತ್ರಿಗಳು ಸುಮಾರು 2½ಸಾವಿರ ಎಕರೆ ಗಳಷ್ಟು ಜಮೀನನ್ನು ಹೊಸನಗರ ತಾಲ್ಲೂಕು ಒಂದರಲ್ಲಿಯೇ ರೆವಿನ್ಯೂ ಲ್ಯಾಂಡಿಗೆ ಮಾಡಿದ್ದಾರೆಂದು ತಿಳಿಸಿದರು. ಅದರೆ ಈ ಒಂದು ಆಶ್ವಾಸನೆ ಈ ಶಾಸನ ಸಭೆಯಲ್ಲಿ ಬಂತೇ ಹೊರತು ಅದು ಬಗ್ಗೆ ಹೊರಡಿಸಿದಂತೆ ಆರ್ಡರ್ ಮಾತ್ರ ಇನ್ನೂ ತಾಲ್ಲೂಕುಮಟ್ಟದಲ್ಲಿಯೇ ಕಮ್ಯೂನಿಕೇಟ ಇವತ್ತಿನವರೆಗೂ ಕೂಡ ರೆವಿನ್ಯೂ ಇಲಾಖೆಗೆ ಅಥವಾ ಅವೇಲಬಲಿಟ್ ಲಿಸ್ಟ್‌ಗೆ ಅದು ಸೇರಿಕೊಂಡಿರ್ ವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ: ನಾವು ಬಗ್ಗೆ ನ್ಸಲ್ಪ ಎಚ್ಚರದಿಂದ ಇರಬೇಕಾಗಿಲ್ಲ. ಹಿಂದೆ ಬ್ರಿಟಿಷ್ ಸಾಮ್ರಾಜ್ಯವನ್ನು ಕಟ್ಟಿಕೊಂಡು ಬಂದಂಥ ಜನರು ಒಂದು ಮಾತನ್ನು ಹೇಳಹೊದೆದ್ದಾರೆ ಆಂತಹವರನ್ನು ಮುಟ್ಟುಗೋಲು ಹಾಕಬೇಕೆಂದು ಈಗ ಆಂತಹವರನ್ನು ಇವರು ಮುಟ್ಟುವುದಕ್ಕೆ ಹೆದರುತ್ತಾರೆ ಏಕೆಂದರೆ ಅವರಿಗೆ ಎಲ್ಲರ ಬೆಂಬಲ ಇರುತ್ತದೆ. ಅವರಲ್ಲಿ ದುಡ್ಡಿನ ಚೀಲ್ವ ಜೊತೆಗೆ ಪ್ರಭಾವ ವಿದ್ಯೆ ಇರುತ್ತದೆ ಅಂತಹವರನ್ನು ಯಾರು ಮುಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ ಯಾರಿಗೆ ಇದರಿಂದ ತೊಂದರೆಯಾಗುತ್ತವೆಂದರೆ ಸಣ್ಣಪುಟ್ಟ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಇನ್ನು ದರಖಾಸ್ತ್ ಕಮಿಟಿ ಮೀಟಿಂಗ್‌ನಲ್ಲಿ ನಾವು ಶಿಫಾರಸ್ ಮಾಡತಕ್ಕ ಸೀಮಿತವಾದಂಥ ಒಂದೇ ಒಂದು ಅಧಿಕಾರವನ್ನು ನಮಗೆ ಕೊಟ್ಟಿದ್ದಾರೆಯೆ ಹೊರತು ಇನ್ನು ಯಾವ ಅಧಿಕಾರ ಸಹ ಇಲ್ಲ, ಎಷ್ಟೋಸಾರಿ ನಾವು ಅನೇಕ ಸಂದರ್ಭಗಳಲ್ಲಿ ಅಲ್ಲಿ ಕಣ್ಣು ಕಣ್ಣು ಬಿಡಬೇಕಾಗುತ್ತದೆ ದರಖಾಸ್ತು ಕಮಿಟಿ ಮೀಟಿಂಗ್ ಎಷ್ಟೋ ದಿವಸಗಳವರೆಗೆ ನಡೆಸಿದ್ದರೂ ಇವತ್ತಿನವರೆಗೆ ದರಖಾಸ್ತು ಸಾಗುವಳಿ ಚೀಟಿಗಳನ್ನು ಕೊಡಲ್ಲಲ್ಲ. ಇದಕ್ಕಿಂತ ಶೋಚನೆಯ ಪರಿಸ್ಥಿತಿ ಬೇರೆ ಯಾವುದು ಇಲ್ಲ. ಅನೇಕ ಜನ ಹರಿಜನ ಗಿರಿಜನರಿಗೆ ನಾವು ದರಖಾಸ್ತ್‌ನಲ್ಲಿ ಜಮೀನುಗಳನ್ನು ಮಂಜೂರು ಮಾಡಿದ್ದೇವೆ. 15ವರ್ಷಗಳವರಿಗೆ ಜೇರೆಯವರಿಗೆ ವಾರಬಾರದೆಂದು ಕಂಡೀಷನ್ ಇದೆ. ಅಕಂಡಿಷನ್ ಹಾಕಿದರೆ ಅದು ನಿಲ್ಲುತ್ತದೋ ಅಥವಾ ನಿಲ್ಲುವುದಿಲ್ಲವೋ ಗೊತ್ತಿಲ್ಲ. ಇವತ್ತು ಅದನ್ನು ಯಾರಿಗಾದರೂ ಕೊಟ್ಟರೆ ಅವನ್ನು ರಕ್ಷಿಪಡಿಸುವುದಕಾಗುವುದಿಲ್ಲ ಹೈಕೋರ್ಟ್ ತೀರ್ಮಾನದಪ್ರಕಾರ ಸಹಕಾರ ಏನು ಮಾಡುವುದಕ್ಕಾಗುವುದಲ್ಲ ಅದಕ್ಕೆ ಪ್ರೊಹಿಬಿಷನ್ ಹಾಕುವ ಹಾಗೆ ಇಲ್ಲವೆಂದು ತೀರ್ಮಾನವಾಯಿತು ಭವ್ಯವತಿ ಒಂದು

ಕೇಸಿನಲ್ಲಿ ಹೈಕೋರ್ಟಿಗೆ ಅಪೀಲು ಹಾಕಿ ಅದರಿಂದೇನಾ ಏನಾಯಿತೆಂಬುದನು ನೋಡಬೇಕು ಸೆಕ್ಷನ್ 10ರ ಪ್ರಕಾರ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್‌ನಲ್ಲಿ ಹೇಳಿರುವಪ್ರಕಾರ ಯಾವತ್ತು ಅದರ ಬಗ್ಗೆ ಪ್ರೊಹಿಬಿಷನ್ ಹಾಕುವ ಹಾಗೆ ಇಲ್ಲ. ಅದರಲ್ಲಿ ಕ್ಲಿಯರ್ ಆಗಿ ಹೇಳಿದೆ ಅಮೆಂಡ್ ಆಗದ ಹೊರತು ಗೇಣಿ ವರ್ಗಕ್ಕೆ ರಕ್ಷಣೆ ಕೊಡುವ ಹಾಗೆ ಇಲ್ಲ.

ಇಷ್ಟು ವಿಷಯಗಳನ್ನು ಹೇಳಿ ಈಗ ತಂದಿರುವ ಬಿಲ್ಲಿಗೆ ನಾನು ಸಂಪೂರ್ಣವಾಗಿ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇರತಕ್ಕ ಪುನರ್ದೆಗೂ, ಚರ್ಚೆಯ ಬಹುಭಾಗಕ್ಕೂ ಯಾವ ಸಂಬಂಧವೂ ಇಲ್ಲವೆಂದು ನಾನು ಬಹಳ ವಿನಯದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಈ ಸಭೆಯ ಮುಂದಿರುವ ವಿಷಯ ಒಂದನೆಯದು ಅಕ್ರಮ ಸ್ವಾಧೀನವಾಗಿರುವುದನ್ನು ಅಂದರೆ 1-7-1968ಕ್ಕೆ ಮುಂಚೆ ಆಗಿರುವಂಥಾದ್ದನ್ನು ತಪ್ಪಿಸುವುದಕ್ಕೆ ಬೇಕಾದಂಥ ಕ್ರಮವನ್ನು ಕೈಗೆದುಕೊಳ್ಳುವ ವಿಷಯ. ಎರಡನೆಯದು, ತಹಸೀಲ್ದಾರರ ತೀರ್ಮಾನದ ಮೇಲೆ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಅಪೀಲು ಹೋಗಿ ಅಲ್ಲಯೇ ತೀರ್ಮಾನವಾಗ ಬೇಕಾದ್ದು ಈ ಅಮೆಂಡ್‌ಮೆಂಟ್ ಗೋಸ್ಕರ ಉಳಿದಿತ್ತು, ಅದನ್ನು ಈಗ ಮಾಡಲಾಗಿದೆ. ಇಲ್ಲಿ ಅತಿ ಮುಖ್ಯವಾದುದೇನೆಂದರೆ ಅಕ್ರಮ ಸ್ವಾಧೀನವಾಗಿದ್ದರೂ ಕೂಡ ಬಡವರು, ನಿರ್ಗತಿಕರು ಅಥವಾ ಹರಿಜನ ಗಿರಿಜನರು ಅಂತಹವರಿಗೆ ಅನಾನುಕೂಲವಾಗದೇ ಇರುವ ರೀತಿಯಲ್ಲಿ ನೋಡಿಕೊಳ್ಳಿ ಎನ್ನುವುದು ಒಂದು ಸಲಹೆ. ಬಾಜುದಾರರು ಅವರ ಅನುಕೂಲ ಕ್ಕೋಸ್ಕರ ಸ್ವಲ್ಪ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುವುದಕ್ಕೆ ಅವಕಾಶವಾಗಲು ಇದೇ ಕಾನೂನಿನಲ್ಲಿ in the name of better cultivation ಎಂಬುದಾಗಿ ಒಂದು ಭಾಗ ಇತ್ತು, ಅದು ಈಗ ಹೋಗುತ್ತದೆ. ಅಂತಹವರಿಗೆ ಅನಾನುಕೂಲವಾಗಬಾರದೆಂದು ನನ್ನ ಸಲಹೆ. ನಾನು ಈಗಾಗಲೇ ಇದರ ಬಗ್ಗೆ ವಿಧಾನಪರಿಷತ್ತಿನಲ್ಲಿ ಒಂದು ಮಾತನ್ನು ಹೇಳಿದ್ದೇನೆ. ಜಿಲ್ಲೆಯಿನಲ್ಲಿ ಹರಿಜನರಾಗಲೀ ಗಿರಿಜನರಾಗಲೀ ತೀರಾ ಬಡವರಾಗಲೀ ಸಾಗುವಳಿ ಮಾಡುತ್ತಿದ್ದರೆ ಅಂತಹವರನ್ನು ಆ ಭೂಮಿಯಿಂದ ಹೊರಗೆ ಹಾಕಿದರೂ ಕೂಡ ಅವರಿಗೆ ರಕ್ಷಣೆ ಮಾಡಿಕೊಡುವುದಕ್ಕೋಸ್ಕರ ಜೇರೆ ಆಲೋಚನೆಯನ್ನು ಮಾಡಿದ್ದೇವೆಂದು ಹೇಳಿದ್ದೇನೆ. ಅದೇ ಮಾತನ್ನು ನಾನು ಈ ಸಭೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅದರ ಮೂಲ ಉದ್ದೇಶವೇನು, ಕಾನೂನಿನ ಮೂಲ ಉದ್ದೇಶವೇನು ಎನ್ನುವುದನ್ನು ಮರೆಯಬಾರದು. 1970ನೇ ಇಸ್ವಿಯಲ್ಲಿಯೇ ಇದನ್ನು 94 (ಎ) ಎಂದು ಪಥ್ಯೆಯಕದಲ್ಲಿ ಸೇರಿಸಿದ್ದಾರೆ. 1970ನೇ ಇಸ್ವಿಯಲ್ಲಿ ಕಾನೂನು ಮಾಡಿ 1-7-1968ನೇ ಇಸ್ವಿಯಿಂದ ಇದು ಜಾರಿಗೆ ಬರುವುದಕ್ಕೆ ಕಾನೂನು ಮಾಡಿದ್ದು, ಕಾನೂನು ಮಾಡಿದ್ದು ಆಷ್ಟೇ ಅಲ್ಲಾ ನನಗೆ ತಿಳಿದ ಮಟ್ಟಿಗೆ, ನಾನು ಸಹ ಬಹಳ ವರ್ಷಗಳಿಂದ ಈ ಶಾಸನ ಸಭೆಯಲ್ಲಿದ್ದೇನೆ; ಆಗ ಅಧಿಕಾರದಲ್ಲಿದ್ದವರು ಯಾವ ಭೂಮಿಯನ್ನಾದರೂ ಅಕ್ರಮಿಸಿಕೊಳ್ಳಿ ಅದನ್ನೆಲ್ಲಾ ನಿಮ್ಮ ಹೆಸರಿಗೆ ಕಾಯಂ ಆಗಿ ಮಾಡಿಕೊಡುತ್ತೇವೆಂದು ಪ್ರಚಾರ ಮಾಡಿದರು. ಆದರಿಂದಲೇ ಆಗಿರುವಂಥ ಅನಾಹುತವಿದು. ಸುಮಾರು 2-3 ಲಕ್ಷ ಎಕರೆ ಭೂಮಿ ಅಕ್ರಮ ಸಾಗುವಳಿ ಆಗಿರತಕ್ಕಂಥದ್ದು. ನ್ಯಾಯವಾಗಿ ಯಾರಿಗೆ ಭೂಮಿ ಸಲ್ಲ ಬೇಕಾಗಿತ್ತೋ ಆ ರೀತಿ ಅವರಿಗೆ ಸಲ್ಲದಿರುವುದಕ್ಕೇ ಇದೇ ಮುಖ್ಯ ಕಾರಣ. ಅದರ ಫಲವೇ ಈಗ ನಮ್ಮ ಮುಂದಿರತಕ್ಕಂಥದು. ಬಡವರಿಗೆ ಸಹಾಯ ಮಾಡುತ್ತೇವೆಂದು ಹೇಳಿ ಹಿಂದೆ ಅವರು ಆ ರೀತಿ ಕಾನೂನನ್ನು ರಚನೆ ಮಾಡಿದ್ದರಿಂದ, ಬಡವರಿಗೆ ಸಹಾಯವಾಗಿದೆ ಬರಾಢ್ಯರಿಗೆ ಈ ರೀತಿಯ ಅನುಕೂಲವಾಗಿರತಕ್ಕಂಥದು. ಅದರಿಂದ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ಲಕ್ಷ್ಯದ ಲ್ಲಿಟ್ಟುಕೊಳ್ಳದೇ, ಯೋಚನೆ ಮಾಡದೇ ಇದ್ದುದರಿಂದ ಇದು ಆಗಿರತಕ್ಕಂಥ ಫಲ ಎನ್ನುವುದನ್ನು ನಾವು ಮರೆಯಬಾರದು. ಆಷ್ಟೇ ಅಲ್ಲಾ ನನ್ನ ಭಾವನೆಯಲ್ಲಿ ಖಚಿತವಾಗಿರತಕ್ಕಂಥ ಹಣ ಎಷ್ಟು ರಮಟ್ಟಿಗೆ ಮುಖ್ಯೋ ನಮ್ಮ ರಾಜ್ಯದ ಯಾವುದೇ ಮೂಲೆಯಲ್ಲಿರತಕ್ಕಂಥ ಭೂಮಿಯೂ ಆಷ್ಟೇ ಮುಖ್ಯವಾದದು. ಹಾಗೂ ಅದನ್ನು ಅಷ್ಟೇ ರಕ್ಷಣೆಯಿಂದ ರಕ್ಷಿಸಲ್ಪಡಬೇಕಾಗಿರತಕ್ಕಂಥ ಸ್ವತ್ತು ಎನ್ನುವುದನ್ನು ಮರೆಯಬಾರದು. ನಿರ್ಭಯವಾಗಿ ಸರ್ಕಾರದ ಆಸ್ತಿಯನ್ನು ಅಕ್ರಮವಾಗಿ ಮಾಡಿಕೊಳ್ಳಬಹುದು ಎನ್ನುವ ಮನೋಭಾವ ಬಾರದೇ ಇರುವ ಹಾಗೆ ಮಾಡಬೇಕು ಎನ್ನುವುದೇ ನನ್ನ ಅಭಿಪ್ರಾಯ. ಹಾಗೆ ನಿರ್ಭಯವಾಗಿ ಸರ್ಕಾರದ ಆಸ್ತಿಯನ್ನು ಆಕ್ರಮಿಸಿ ಕೊಂಡಂಥ ಸಮ

ಯಿದಲ್ಲಿ ಏನಾಗುತ್ತದೆ. ಎನ್ನುವುದನ್ನು ಸಹ ನಾವು ಅಲೋಚನೆ ಮಾಡಬೇಕು. ಆಗ ಯಾವುದೇ ಒಂದು ರಕ್ಷಣೆ ಇಲ್ಲದ ಹಾಗೆ ಆಗುತ್ತದೆ ಎನ್ನುವುದನ್ನೆಲ್ಲಾ ದೃಷ್ಟಿಯಲ್ಲಿಟ್ಟು ಕೊಳ್ಳಬೇಕು. ಇವತ್ತು ವ್ಯವಸಾಯಕ್ಕೆ ಭೂಮಿ ಎಷ್ಟು ಅವಶ್ಯಕವೋ ಹಾಗೆಯೇ ಪಶು ಸಂಪತ್ತನ್ನು ಆಭಿವೃದ್ಧಿ ಮಾಡುವುದಕ್ಕೂ ಭೂಮಿ ಅವಶ್ಯಕ. ನಮ್ಮ ರಾಜ್ಯದಲ್ಲಿ ನನಗೆ ತಿಳಿದಿರುವ ಪ್ರಕಾರ 50 ಲಕ್ಷಕ್ಕೂ ಮೇಲ್ಪಟ್ಟು ಕುರಿ. ಮೇಕೆಗಳು ಇವೆ. ಲಕ್ಷಾಂತರ ದನಗಳು, ಎಮ್ಮೆಗಳು ಇದೆ. ಇವುಗಳೆಲ್ಲಾ ಮೇಯುವುದಕ್ಕೆ ಹುಲ್ಲು ಗಾವಲು ಇರಬೇಕೆಂದು ಪಹಣಿಯಲ್ಲಿ ಮಾಡಿದ್ದರೂ ಕೂಡ ಎಷ್ಟೋ ಕಡೆ ಅರ್ಧಕ್ಕರ್ಧ ಜಮೀನು ಇಲ್ಲವೇ ಇಲ್ಲ. ಯಾರೋ ಅನುಕೂಲಸ್ಥರು ಪಶುಗಳನ್ನು ಸಾಕಿರುತ್ತಾರೆ ಅಂಥವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಈ ರೀತಿ ಒಂದು ವಿಧೇಯಕವನ್ನು ಮಾಡಿದ್ದೀರಿ ಎನ್ನುವ ಅರ್ಥದಲ್ಲಿ ಕೆಲವು ಸದಸ್ಯರುಗಳೇ ಹೇಳಿದರು. ಆದರೆ ಹಳ್ಳಿಯ ಜೀವನವನ್ನು ನೋಡಿದ್ದೇ ಆದರೆ, ಅವರು ಹೇಳಿದ್ದರಲ್ಲಿ ಅರ್ಥವೇ ಇಲ್ಲ ಎನ್ನುವುದು ಕಾಣುತ್ತದೆ. ಅನೇಕ ಜನ ಹಳ್ಳಿಗಳಲ್ಲಿ ಕುರಿ ಮೇಕೆಗಳನ್ನು ಸಾಕಿ ಜೀವನ ಮಾಡತಕ್ಕಂಥವರೂ ಇದ್ದಾರೆ. ಅವರಿಗೂ ಸಹ ಇದು ಸಹಾಯಕವಾಗುತ್ತದೆ. ಆದುದರಿಂದ ಪಶು ಸಂಪತ್ತನು ಈಗಿರುವುದನ್ನು ಉಳಿಸಿಕೊಂಡು ಹೋಗುವುದಕ್ಕೇ ಆಗಲೀ ಆಥವಾ ವೃದ್ಧಿ ಮಾಡುವುದಕ್ಕಾಗಲೀ ಸ್ವಲ್ಪ ಮಟ್ಟಿಗಾದರೂ ಭೂಮಿಯನ್ನು ಉಳಿಸಬೇಕು ಎನ್ನುವಂಥಾದನ್ನ ದೃಷ್ಟಿಯಲ್ಲಿಟ್ಟಿರಬೇಕಾಗಿದೆ. ಇನ್ನು ಅರಣ್ಯ ಸಂಪತ್ತು ಎಷ್ಟು ಇರಬೇಕು ಎನ್ನುವ ಬಗ್ಗೆ ಒಂದು ವಿಧೇಯಕವಿದೆ. ಅರಣ್ಯ ಸಂಪತ್ತು ಇಷ್ಟೇ ಇರಬೇಕು ಎನ್ನುವ ಬಗ್ಗೆ ಕೂಡ ಪಾದಪವಾದ ಮಾಡತಕ್ಕಂಥ ಮನೋಭಾವ ಬೆಳೆದಿದೆ. ಇನ್ನು ಕೆರೆ ಅಂಗಳದಲ್ಲಿ ನೀರು ನಿಲ್ಲತಕ್ಕಂಥ ಪ್ರದೇಶವನ್ನೂ ಕೂಡ ಅಲ್ಲಿಯೇ ಇರತಕ್ಕಂಥ ಮಣ್ಣನ್ನು ಹಾಕಿ ಅದನ್ನು ಎತ್ತರ ಮಾಡಿ ಅಕ್ರಮವಾಗಿ ಸಾಗುವಳಿ ಮಾಡಿರತಕ್ಕಂಥ ಉದಾಹರಣೆಗಳು ಸಾವಿರಾರು ಇದೆ. ಇದು ಏತಕ್ಕೆ ಈ ಒಂದು ಮನೋಭಾವ ಬೆಳೆಯುತ್ತಿದೆಯೆಂದರೆ, ಯಾವುದನ್ನೇ ಆಗಲೀ ಅಕ್ರಮಿಸಿಕೊಂಡಲೆ ಅದನ್ನು ನಿಮಗೇ ಕೊಡುತ್ತೇವೆ ಎನ್ನುವ ರೀತಿಯಲ್ಲಿ ಹಿಂದೆ ಪ್ರಚಾರ ಮಾಡಿದ್ದರಿಂದ ಈ ಒಂದು ಪರಿಸ್ಥಿತಿ ಉಂಟಾಯಿತೆಂದು ನನ್ನ ಅಭಿಪ್ರಾಯ. ಆದುದರಿಂದ ಈ ಅಭಿಪ್ರಾಯ ಇವತ್ತು ಮನ್ನಣೆ ಸಿಗಬಾರದು ಮತ್ತೆ ಈ ರೀತಿ ಅಕ್ರಮವಾಗಿ ಅಕ್ರಮಿಸಿಕೊಂಡಿರತಕ್ಕಂಥವರಿಗೂ ಸಹ ಉಗ್ರವಾದ ಶಿಕ್ಷೆ ಕೊಟ್ಟು ಬಿಡುವುತ್ತೇವೆ ಎನ್ನುವ ದೃಷ್ಟಿಯಿಟ್ಟು ಕೊಂಡಿದ್ದೇವೆ. ಆ ರೀತಿ ನಾವು ಬರಿದೇ ಹೋದರೆ ಯಾರಿಗೆ ಅವಶ್ಯಕವಾಗಿ ಭೂಮಿ ಕೊಡಬೇಕು ಅಂಥವರಿಗೆ ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಮೇಲೆ ರಾಜ್ಯದಲ್ಲಿ ಯಾವುದಾವುದಕ್ಕೆ ಭೂಮಿಯನ್ನು ರಿಜರ್ವ್ ಮಾಡಬೇಕೋ ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ನಾವು ಮೊಟ್ಟಮೊದಲನೆಯದಾಗಿ ಗಮನಿಸಬೇಕು. ಇನ್ನು ನಾನು ಹೆಚ್ಚಿಗೆ ಹೇಳಬೇಕಾದ ಆಗತ್ಯವಿಲ್ಲ. ಮಾನ್ಯ ಸ್ನೇಹಿತರುಗಳು ಅನೇಕ ವಿಷಯಗಳನ್ನು ಹೇಳಿದ್ದಾರೆ. ಏನು ಬೆಂಬಲಿಯನ್ನು ಮಂಜೂರು ಮಾಡುವಾಗ ಸಾಗುವಳಿ ಚೀಟಿಯನ್ನು ಬಹಳ ತಡವಾಗಿ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಹಾಗೆಯೇ ಸಾಗುವಳಿ ಚೀಟಿ ಅವರ ಮಕ್ಕಳ ಕಾಲಕ್ಕೋ ಮೊಮ್ಮಕ್ಕಳ ಕಾಲಕ್ಕೋ ಸಿಗುತ್ತದೆಂದು ಹೇಳಿದರು. ಆದರೆ ಸಾಗುವಳಿ ಚೀಟಿಯನ್ನು ಮೊದಲು ಕೊಡುತ್ತಿದ್ದ ಪದ್ಧತಿ ಹೇಗೆಂದರೆ ಮೊದಲು ಕಮಿಟಿಯವರು ಕಾನೂನಿನ ಪ್ರಕಾರ ತೀರ್ಮಾನ ಮಾಡಿದ ಕೂಡಲೇ ಭೂಮಿ ಎಲ್ಲಿದೆ ಎನ್ನುವುದನ್ನೂ ಸಹ ಗುರುತು ಮಾಡಿದ ಸಾಗುವಳಿ ಚೀಟಿಯನ್ನು ಕೊಟ್ಟು ಬಿಡುತ್ತಿದ್ದರು. ಆದರಿಂದ ಏನಾಗುತ್ತಿತ್ತು ಎಂದರೆ ಭೂಮಿ ಇದೆಯೋ ಇಲ್ಲವೋ, ಯಾವ ಮೂಲೆಯಲ್ಲಿ ದೆಯೆನ್ನುವುದು ಸಹ ತಿಳಿಯುತ್ತಾ ಇರಲಿಲ್ಲ. ಎರಡನೆಯದಾಗಿ 10-10 ಎಕರೆ ಭೂಮಿ ಇದ್ದರೆ ಯಾವ ಭಾಗದ ಜಮೀನು ಮಂಜೂರು ಮಾಡಿದ್ದಾರೆ ಎನ್ನುವುದು ಕೂಡ ಗೊತ್ತಾಗದೆ ಇರತಕ್ಕಂಥ ಪ್ರಸಂಗಗಳು ಉಂಟಾಗಿ ಬಹಳ ತೊಂದರೆಯಾಗುತ್ತಿತ್ತು. ಇದನ್ನೆಲ್ಲಾ ಗಮನಿಸಿ ಈಗ ನಾವು ಏನು ಬದಲಾವಣೆ ಮಾಡಿದ್ದೇವೆಂದರೆ ಜಮೀನು ಮಂಜೂರು ಆದ ಕೂಡಲೇ ಆದನ್ನು ಅಳತೆ ಮಾಡಿ, ಹಾಕಿ ಗುರುತು ಅವನಿಗೆ ಕೊಡಬೇಕು ಎಂದು ಮಾಡಿದೆ. ಆದರಿಂದ ಸ್ವಲ್ಪ ನಿಧಾನವಾಗಬಹುದಾ. ಆದರೆ 6 ತಿಂಗಳು ಗಟ್ಟಲೆ ಪರ್ಮನೆಂಟ್ ಆಗಿ ಇಟ್ಟುಕೊಳ್ಳತಕ್ಕಂಥದ್ದನ್ನು ನಾನು ಒಪ್ಪುವುದಿಲ್ಲ ಎಲ್ಲೆಲ್ಲ ಸಾಗುವಳಿ ಚೀಟಿಯನ್ನು ಕೊಡುವುದು ತಡವಾಗಿದೆ ಅಂಥ ಕಡೆಗಳಲ್ಲೆಲ್ಲ ಬೇಗ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಸರ್ಕ್ಯುಲರ್‌ಗಳನ್ನು ಕಳುಹಿಸಿದ್ದೇವೆ. ಹಾಗೆಯೇ ನರ್ವೆ ಇಲಾಖೆಯವರೂ ಸಹ ಸರ್ವೆ ಮಾಡಿ, ಮಾಲಕರಿಗೆದುಕೊಂಡು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಸರ್ಕ್ಯುಲರ್ ರೂಪದಲ್ಲಿ ತಿಳಿಸಿದ್ದೇವೆ. ಇಷ್ಟೇ ಅಲ್ಲದೆ ಒತ್ತಾಯ ಮಾಡಿ ಅಷ್ಟು ಬಾಗುತ್ತ ಸಾಗುವಳಿ ಚೀಟಿಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಮಾನ್ಯ ಸಭೆಯಲ್ಲಿ ಭರವಸೆಕೊಡುವುದಕ್ಕೆ ಇಷ್ಟ

ಪಡುತ್ತೇನೆ, ಮಾನ್ಯ ಶೀರಾಳಿ ಚಂದ್ರಶೇಖರ್‌ರವರು ಪರಭಾರೆ ಮಾಡಲು ಯಾವ ಶರತ್ತುಗಳನ್ನೂ ಕೂಡ ಹಾಕಬಾರದೆಂದು ಹೇಳಿದರು ಅವರು ಯಾವ ಆಧಾರದ ಮೇಲೆ ಹೇಳಿದರೋ ಗೊತ್ತಿಲ್ಲ. ಈ ಶರತ್ತುಗಳನ್ನು ಹಾಕಲೇ ಕೂಡದು, ಹಾಕಿದರೂ ಕೂಡ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆ್ಯಕ್ಟ್‌ನ ವಿಧಿನಿಯಮಗಳನ್ನು ವಿರೋಧಿಸಿದಂತಾಗುತ್ತದೆಂದು ಹೇಳಿದರು. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಒಂದು ಸೆಂಟ್ರಲ್ ಗ್ರಾಂಟ್ಸ್ ಆ್ಯಕ್ಟ್ ಎಂದು ಜಾರಿಗೆ ತಂದಿದ್ದೇವೆ. ಆ ಕಾನೂನಿನ ಪ್ರಕಾರ ಶರತ್ತುಗಳನ್ನು ಹಾಕಿರುವುದು ನರಿಯೆಂದು ಇರುವುದರಿಂದ ನಾವು ಸಹ ಶರತ್ತುಗಳನ್ನು ಹಾಕಿರುವುದು ಸರಿಯೊಗಿದೆಯೆಂದು ನಾನು ತಿಳಿನುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಆದರ ಬಗ್ಗೆ ನಾನು ಪುನಃ ಇಲ್ಲಿ ಪ್ರಸ್ತಾಪ ಮಾಡದೆ. ಅಕ್ರಮವಾಗಿ ಸಾಗುವಳಿ ಮಾಡಿದಂಥ ಭೂಮಿಯನ್ನು ಸರ್ಕಾರದ ವರು ತೆಗೆದುಕೂಂಡ ಮೇಲೆ ಸರಿಯಾಗಿ ಹಂಚುವ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಇಷ್ಟು ಮಾತ್ರ ಹೇಳಿ ನಾನು ತಂದಿರತಕ್ಕಂಥ ತಿದ್ದುಪಡಿಗೆ ಬೆಂಬಲ ಕೂಡಬೇಕೆಂದು ಹೇಳಿ ಈ ಸಭೆಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ — ಸ್ವಾಮಿ, ಒಂದೇ ಒಂದು ಸ್ಪಷ್ಟೀಕರಣ ಮಾಡಬೇಕು. ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನು ಜೆನ್ನಾಗಿ ತಿಳಿದಕೊಂಡಿದ್ದಾರೆಂದು ಭಾವಿಸಿದ್ದೇನೆ. ಈಗ ಕಾನೂನಿನ ಪ್ರಕಾರ ಯಾರು 10-20 ವರ್ಷಗಳ ಅಕ್ರಮವಾಗಿ, ಒತ್ತುವರಿ ಮಾಡಿಕೊಂಡು ಬಂದಿರುತ್ತಾರೋ ಅಂಥವರಿಗೆ ಪುನಃ ಅದೇ ಜಮೀನು ಸಿಗುತ್ತದೆ ಎನ್ನುವ ಬಗ್ಗೆ ಜಮೀನು ಇಲ್ಲದೇ ಇರತಕ್ಕಂಥವರ ಸಂಖ್ಯೆ ಜಾಸ್ತಿ ಇರುವುದರಿಂದ ಪುನಃ ಆವರಿಗೇ ಸಿಕ್ಕೇಸಿಗುತ್ತದೆ ಎನ್ನುವ ಗ್ಯಾರಂಟಿ ಇಲ್ಲ. ನಿರ್ಗತಿಕರು, ಬಹಳ ಬಡವರು ಆ ರೀತಿ ಒಂದು ವೇಳೆ ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿದ್ದರೆ 3, 4, 5, ಎಕರೆನೋ ಎಷ್ಟೋ ಒಂದು ಮಿತಿಯನ್ನು ನಿಗದಿ ಮಾಡಿ ಅವರಿಗೆ ಕೊಡಬಕ್ಕಂಥದರ ಬಗ್ಗೆ ಪರ್ಯಾಲೋಚನೆ ಮಾಡಿ ತಾವು ಸಭೆಗೆ ಉತ್ತರವನ್ನು ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಈಗ ತಂದಿರುವ ತಿದ್ದುಪಡಿಯಲ್ಲಿ ತಾವು ಹೇಳುವ ರೀತಿ ಸೇರಿಸುವುದಕ್ಕಾಗುವುದಿಲ್ಲ. ತಾವು ಹೇಳುವ ಬಗ್ಗೆ ಯಾವರೀತಿ ರಕ್ಷಣೆ ಮಾಡಬೇಕು ಎನ್ನುವ ಬಗ್ಗೆ ಸಂಪೂರ್ಣ ಅನುಕಂಪ ಇದೆ, ಅದನ್ನು ವಿಚಾರ ಮಾಡುತ್ತೇನೆ ಎಂದು ಆಷ್ಟುಮಾತ್ರ ಹೇಳಬಲ್ಲೆ. ಈಗ ಆ ಒಂದು ರೀತಿ ಸೇರಿಸಿದರೆ ಅಕ್ರಮ ಸಾಗುವಳಿ ಮಾಡುತ್ತಿರುವವನನ್ನು ಬಿಡಿನುವುದಕ್ಕೆ ಕಷ್ಟವಾಗುತ್ತದೆ. ಈಗ ಸರ್ಕಾರದಿಂದ ಎಷ್ಟು ಭೂಮಿ ಹಂಚಿಕೆಯಾಗಿದೆ ಇದು ಅದಕ್ಕಿಂತ ಜಾಸ್ತಿ ಅಕ್ರಮಣ ಸಾಗುವಳಿ ಮಾಡಿಕೊಂಡಿದಾರೆ. ಮೊದಲು ಅವನ್ನು ಕುರಾ ಮಾಡಿಸೋಣ. ಈಗ ಸೇರಿನುವುದಕ್ಕೆ ಹೋದರೆ ಅನುಕೂಲಕ್ಕಿಂತ ಹೆಚ್ಚು ಅನಾನುಕೂಲ ಉಂಟಾಗುತ್ತದೆ. ಆದುದರಿಂದ ಈ ಸಂದರ್ಭದಲ್ಲಿ ಆ ರೀತಿ ಮಾಡುವುದು ಸರಿಯಿಲ್ಲ ಎಂದು ಹೇಳತ್ತೇನೆ.

ಶ್ರೀ ಎನ್. ಎಂ. ಶೀರಾಳಿ ಚಂದ್ರಶೇಖರ್.—ದರಖಾಸ್ತು ಜಮೀನಿನ ವಿಶಯವಾಗಿ ಹೇಳುವುದಾದರೆ, ಈಗ ಸರ್ಕಾರದಿಂದ ರಚನೆಯಾದಂಥ ಕಮಿಟಿಯಲ್ಲಿ ರೇಂಜ ಆಫೀಸರ್ ಇರುತ್ತಾರೆ. ಸರ್ವೆ ಇಲಾಖೆಯವರು ಇರುತ್ತಾರೆ ಮೊದಲು ಇಂತಹ ಗ್ರಾಮದ ಇಂತಹ ಸರ್ವೆ ನಂಬರ್ ತೆಗೆದು ಕೊಳ್ಳುತ್ತೇವೆ ಎಂದು ತಿಳಿಸಿರುತ್ತಾರೆ, ಒಂದು ಸಾರಿ ಕಮಿಟಿಯಲ್ಲಿ ತೀರ್ಮಾನವಾದ ಮೇಲೆ ಮತ್ತೆ ಈ ರೇಂಜ್ ಆಫೀಸಿಗೆ ಅಥವಾ ಸರ್ವೆ ಆಫೀಸಿಗೆ ಏತಕ್ಕೆ ಹೋಗಬೇಕು ? ಈ ರೀತಿ ಹೋಗುವುದರಿಂದ ಬಹಳ ವಿಳಂಬವಾಗುತ್ತದೆ ಈ ರೀತಿ ಮತ್ತೆ ರೇಂಜ್ ಆಫೀಸಿಗೆ ಅಥವಾ ಸರ್ವೆ ಇಲಾಖೆಗೆ ಹೋಗುವುದನ್ನು ಏತಕ್ಕೆ ತಪ್ಪಿಸಬಾರದು ಎಂದು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಅಧಿಕಾರಿಗಳು ಅಲ್ಲಿಯೇ ತಿಳಿಸಬಹುದು, ಆದರೆ ಆ ತೊಡಕು ನಿವಾರಣೆ ಮಾಡುವುದಕ್ಕೆ ಮುಂಚೆ, ಈಗ ತಂದಿರತಕ್ಕ ತಿದ್ದುಪಡಿ ಮಾಡುವ ಮುಂಚೆ ಕೆಲವು ವಿಷಯ ಹೈಕೋರ್ಟಿನಲ್ಲಿ ಹೋಗಿದ್ದುದು ಇತ್ತು. ಮೊದಲು ದರಖಾನ್ತು ಕಮಿಟಿಯಲ್ಲಿ ತೀರ್ಮಾನವಾಗಿ ಭೂಮಿಯನ್ನು ಹಂಚಿದ ಕೂಡಲೇ ಅಲ್ಲಿ ಜಮೀನು ಇದೆ ಎನ್ನುವ ಭರವಸೆ ಇರುತ್ತಿರಲಿಲ್ಲ. ಈಗ ಅದು ಯಾವ ಸ್ಥಳದಲ್ಲಿ ಎಷ್ಟು ಭೂಮಿ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು ಆ ಸ್ಥಳದಲ್ಲಿ ಯಾವುದನ್ನು ನೋಡುತ್ತಾರೆ. ಅವರು ಪುಸ್ತಕದಲ್ಲಿ ಇರತಕ್ಕಂಥಾದ್ದನ್ನು ನೋಡುತ್ತಾರೆ, ವಸ್ತುತಃ ಆ ಸ್ಥಳದಲ್ಲಿ ಎಷ್ಟು ಭೂಮಿ ಇದೆ ಎಂದು ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ. ಇವರು ತೀರ್ಮಾನ ಮಾಡುವುದಕ್ಕೆ ಮುಂಚೆ ಎಷ್ಟು ಅಕ್ರಮ ಸ್ವಾಧೀನವಾಗಿದೆ,

ಎಷ್ಟು ಖಾಲಿ ಜಮೀನು ಇದೆ ಅಷ್ಟಕ್ಕೆ ಅಪ್ಲೈಡೆಬಿಲಿಟಿ ಲಿಸ್ಟ್ ಮಾಡಬೇಕು ಎಂದು ಸರ್ಕಾರದಿಂದ ಆದೇಶ ಇದ್ದರು ಆ ಅಪ್ಲೈಡೆಬಿಲಿಟಿ ಲಿಸ್ಟ್ ಮಾಡದೇ ಇರುವುದು ಬಹಳ ಇದೆ, ಆದ್ದುದರಿಂದ ಅವರು ಒಂದು ಪಕ್ಷ ತೀರ್ಮಾನ ಮಾಡಿದರೂ ಆ ತೀರ್ಮಾನ ಕಾರ್ಯಗತವಾಗಬೇಕಾದರೆ ಈ ಒಂದು ಅಡಚಣೆ ಇದ್ದುದು ತಗೆಯಬೇಕಿತ್ತು. ಅಲ್ಲದೇ ಆ ಸ್ಥಳದಲ್ಲಿ ಸರ್ವೆ ಮಾಡುವುದು ಬಹಳ ಆವಶ್ಯಕ ಇರುತ್ತದೆ. ಅಲ್ಲಿ ಸರ್ವೆ ಮಾಡದೇ ಸಾಗುವಳಿ ಚೀಟಿ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಅಲ್ಲಿ ಸರ್ವೆ ಮಾಡದೇ ಸಾಗುವಳಿ ಚೀಟಿ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಇನ್ನು ಮೂರ್ಕ ಇರತಕ್ಕ ಜಮೀನಲ್ಲಿ ಮಾಲ್ಕಿ ತಗೆಯದೆ ಕೊಟ್ಟರು ತೊಂದರೆಯಾಗುತ್ತದೆ. ಯಾರಿಗೆ ಜಮೀನು ಮಂಜೂರಾಗುತ್ತದೆ ಅವನಿಗೆ ಕೊಡಬೇಕುಎಂದು ಇರುತ್ತದೆ, ಈ ನಿಯಮ ಪಾಲಿಸುವುದಕ್ಕೆ ಸರ್ಕಾರಕ್ಕೆ ಬೇರೆ ವಿಧವಾದ ನಷ್ಟಗಳು ಸಂಭವಿಸದೇ ಇರುವ ರೀತಿಯಲ್ಲಿ ಮಾಡಬೇಕಾದುದು ಅವಶ್ಯ ಇರುತ್ತದೆ ಆ ದೃಷ್ಟಿಯಿಂದ ನಿಧಾನವಾಗಿದೆ.

MR. DEPUTY SPEAKER.—the question is :

'That the Karnataka Land Revenue (Amendment) Bill, 1976 as passed by the Legislative Council be taken into considertration.'

The motion was adopted.

CLAUSES 2 *to* 5

MR. DEPUTY SPEAKER.—The question is :

"That Clauses 2 to 5, both inclusive, do stand part of the Bill."

The motion was adopted,

Clauses 2 to 5, both inclusive, were added to the Bill.

CLAUSE 1 ECT.,

MR. DEPUTY SPEAKER.—The question is :

"That Clause 1, the long Title the Preamble and the Enacting formula do stand part of the Bill.'

The Motion was adopted

Clause 1, the long Title the Preamble and the Enacting formula were added to the bill,

motion to pass

SRI N. HUTCHAMASTHY GOWDA (Minister for Revenue).— Sir, I beg to move :

"That the Karnataka Land Revenue (Amendment) Bill, 1976 as passed by the Legislative Council be passed.'

MR. DEPUTY SPEAKER.—The question is :

"That the Karnataka Land Revenue (Amendment) Bill, 1976 as passed by the Legislative Council be passed.'

The Motion was adopted and the Bill was passed.